ಬೆಲೆ ರೂ.2.50
D.O.P - 15th of every month at Udupi Sorting Office

# ಶ್ರೀ ಶಾರದಾ

ಮಾಸಪತ್ರಿಕೆ – 15 ಜುಲೈ 2015

॥ ಧಿಯೋ ಯೋನಃ ಪ್ರಚೋದಯಾತ್ ॥

**Smt. Nagaveni Ullas**
Proprietor
Mobile : 9741626190
E-mail : rao.ullas@yahoo.co.in

**RAMDEV ENTERPRISES**
"Ramdev", Opp. Balaganapathi Temple, Padubidri-574111, Udupi Dist.

**Authorised Distributor For :**
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-15 ಸಂಚಿಕೆ-7 ಪುಟಗಳು-8 Registered Under No.UDP/1260/2015-2017 Licenced to Post without Prepayment WPP No. SK/WPP/UDP/81/15-17

## ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿಗೆ ನೂತನ ಆಡಳಿತ ಮಂಡಳಿ

ತಾ.21-06-2015ರ ರವಿವಾರ ಸಂಜೆ ಜರಗಿದ ಸಂಘದ ವಾರ್ಷಿಕ ಮಹಾಸಭೆಯಲ್ಲಿ 2015ನೇ ಇಸವಿಯಿಂದ ಮೂರು ವರ್ಷಗಳ ಅವಧಿಗಾಗಿ ನೂತನ ಆಡಳಿತ ಮಂಡಳಿಯ ಆಯ್ಕೆ ನಡೆಯಿತು. ಡಾ। ವೈ.ಸುದರ್ಶನ್ ರಾವ್, ಶ್ರೀ ವೈ.ಭುವನೇಂದ್ರ ರಾವ್, ಶ್ರೀ ಕೊಕ್ರಾಡಿ ಸುರೇಶ್ ರಾವ್, ಶ್ರೀ ಕೆ. ಸುಧಾಕರ ರಾವ್, ಶ್ರೀ ಎಸ್.ಎಂ. ರಾವ್, ಶ್ರೀ ವೈ.ಪ್ರಕಾಶ್ ಕುಮಾರ್, ಶ್ರೀ ಬಿ. ಜಯರಾಮ ರಾವ್, ಶ್ರೀ ಐ.ಕೆ.ಜಯಚಂದ್ರ ರಾವ್, ಶ್ರೀ ಕರಂದಾಡಿ ವಾಸುದೇವ ರಾವ್, ಡಾ। ಅಮಿತಾ ಶೋಭಾ ರಾವ್, ಡಾ। ಬೈಕಾಡಿ ಸೂರ್ಯನಾರಾಯಣ ರಾವ್, ಶ್ರೀ ಅಲೆವೂರು ಭಾಗ್ಯಚಂದ್ರ ರಾವ್, ಶ್ರೀ ಚಿದಂಬರ ಶ್ಯಾನುಭಾಗ್, ಶ್ರೀಮತಿ ಇಂದಿರಾ ದಿವಾಕರ್ ರಾವ್, ಶ್ರೀ ಟಿ.ಜಗದೀಶ ರಾವ್, ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್, ಶ್ರೀಮತಿ ಶೀತಲ್ ರಾವ್, ಶ್ರೀ ಸುರೇಶ್ ಶ್ಯಾನುಭಾಗ್, ಶ್ರೀಮತಿ ಉಷಾ ಕೆ. ಎಲ್. ಶ್ಯಾನುಭಾಗ್, ಶ್ರೀಮತಿ ಉಷಾ ಮೋಹನ್‌ದೇವ್, ಶ್ರೀ ವಸಂತ ರಾವ್ ಕರಂಬಳ್ಳಿ, ಶ್ರೀ ವೈ.ವಿಠಲ ರಾವ್, ಶ್ರೀ ವೆಂಕಟರಾವ್ ಕರಂಬಳ್ಳಿ, ಶ್ರೀ ಬೆಳ್ಳೆ ಭವಾನಿ ಶಂಕರ ರಾವ್, ಶ್ರೀ ಹೆರ್ಗ ನಿರಂಜನ ರಾವ್, ಶ್ರೀ ಎ.ವಿ.ರಾವ್, ಶ್ರೀ ಪರೀಕ ಚಂದ್ರಶೇಖರ ರಾವ್‌ರವರು ಅವಿರೋಧವಾಗಿ ಆಯ್ಕೆಯಾದರು. ಈ ಇಪ್ಪತ್ತೇಳು ಜನ ನಿರ್ದೇಶಕರು ಶ್ರೀ ವೈ. ಭುವನೇಂದ್ರ ರಾವ್ ಇವರನ್ನು ಅಧ್ಯಕ್ಷರನ್ನಾಗಿಯೂ ಕುತ್ಪಾಡಿ ಸುರೇಶರಾಯರನ್ನು ಕಾರ್ಯದರ್ಶಿಯಾಗಿಯೂ, ಶ್ರೀ ಕೆ.ಸುಧಾಕರ ರಾಯರನ್ನು ಕೋಶಾಧಿಕಾರಿಯಾಗಿಯೂ ಅವಿರೋಧವಾಗಿ ಆಯ್ಕೆ ಮಾಡಿದರು. ಶ್ರೀ ಎಸ್.ಎಂ.ರಾವ್ ಹಾಗೂ ಡಾ।ವೈ.ಸುದರ್ಶನ್ ರಾವ್ ಇವರು ಉಪಾಧ್ಯಕ್ಷರುಗಳಾಗಿಯೂ, ಶ್ರೀ ಐ.ಕೆ. ಜಯಚಂದ್ರ ರಾವ್ ಹಾಗೂ ಶ್ರೀಮತಿ ಅಮಿತಾ ಶೋಭಾ ರಾವ್ ಇವರುಗಳು ಜೊತೆ ಕಾರ್ಯದರ್ಶಿಗಳಾಗಿಯೂ ಆಯ್ಕೆಯಾದರು. ಶ್ರೀ ಬಿ.ವಾಸುದೇವ ರಾವ್, ಶ್ರೀ ಎಂ. ಫಾಲಚಂದ್ರ ರಾವ್, ಡಾ।ಪಿ.ವಿಠಲರಾವ್, ಶ್ರೀ ಎ. ರಮೇಶ್ ರಾವ್ ಶ್ಯಾನುಭಾಗ್ ಸತಾರ, ಶ್ರೀ ಸಿ.ಎಸ್.ರಾವ್, ಶ್ರೀ ಪಿ. ವಾಗೀಶ ಶಾಸ್ತ್ರಿ, ಶ್ರೀ ಯು. ಪ್ರಫುಲ್ಲಚಂದ್ರ ರಾವ್ ಇವರುಗಳನ್ನು ಒಳಗೊಂಡ ಆಡಳಿತ ಮಂಡಳಿಗೆ ಮಾರ್ಗದರ್ಶನ ನೀಡುವ ಸಲಹಾ ಸಮಿತಿಯನ್ನೂ ರಚಿಸಲಾಯಿತು.


### ನೂತನ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಕೋಶಾಧಿಕಾರಿಗಳ ಪರಿಚಯ :



**ಶ್ರೀ ವೈ.ಭುವನೇಂದ್ರ ರಾವ್** ಇವರು ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ಜ್ಯೋತಿಷ್ಕರ ಪುತ್ರ. ಇವರು ಬಿ.ಟೆಕ್.ಎಡ್, ಎಮ್.ಎ. ಪದವೀಧರರಾಗಿದ್ದಾರೆ. ಶಿರ್ವದ ಸ್ಟೆಂಟ್ ಮೇರೀಸ್ ಪಿ.ಯು. ಕಾಲೇಜಿನಲ್ಲಿ ಅಧ್ಯಾಪಕರಾಗಿಯೂ, ಬಂಟಕಲ್ಲಿನ ನಾರಾಯಣಗುರು ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯರಾಗಿಯೂ ಹಾಗೂ ಇಂದ್ರಾಳಿ ಇಂಗ್ಲೀಷ್ ಮೀಡಿಯಂ ಹೈಸ್ಕೂಲಿನ ಮುಖ್ಯಶಿಕ್ಷಕರಾಗಿ ಸೇವೆ ಸಲ್ಲಿಸಿದ್ದಾರೆ. ಈ ಹಿಂದೆ ಶಿರ್ವ ಜೇಸಿ ಇಂಟರ್ ನ್ಯಾಶನಲ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಶ್ರೀ ಎಲ್ಲೂರು ಲಕ್ಷ್ಮೀನಾರಾಯಣ ರಾವ್ ಜ್ಯೋತಿಷ್ಕ ಮೆಮೋರಿಯಲ್ ಚಾರಿಟೇಬಲ್ ಟ್ರಸ್ಟ್‌ನ ಧರ್ಮದರ್ಶಿಗಳಾಗಿಯೂ, ಉಡುಪಿ ಹಿರಿಯ ನಾಗರಿಕರ ವೇದಿಕೆಯ ಕೋಶಾಧಿಕಾರಿಯಾಗಿಯೂ, ಉಡುಪಿಯ ನಿವೃತ್ತ ಶಿಕ್ಷಕರ ಸಂಘದ ಲೆಕ್ಕಪರಿಶೋಧಕರಾಗಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಶ್ರೀಸ್ಥಾನಿಕ ಬ್ರಾಹ್ಮಣ ಸಂಘದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಕೊಕ್ರಾಡಿ ಸುರೇಶ ರಾವ್** ಇವರು ಉಡುಪಿಯ ಬಳಿಯ ಕುತ್ಪಾಡಿಯ ನಿವಾಸಿ. ಮೂಲತ ಬೆಳ್ತಂಗಡಿಯವರು. ಎಮ್.ಎ. ಪದವೀಧರರಾದ ಇವರು ಬಾರ್ಡರ್ ಸೆಕ್ಯೂರಿಟಿಫೋರ್ಸ್(BSF)ನಲ್ಲಿ 23ವರ್ಷ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ. ನಮ್ಮ ಸಂಘದಲ್ಲಿ ಹಲವು ವರ್ಷ ವಿವಿಧ ವೇದಿಕೆಗಳಲ್ಲಿ ಸಕ್ರಿಯರಾಗಿ ಸೇವೆ ಸಲ್ಲಿಸಿದ್ದಾರೆ. ಸದ್ಯ ಉಡುಪಿಯ ದೀಪಾ ಎಂಟರ್‌ಪ್ರೈಸಸ್‌ನಲ್ಲಿ ಉದ್ಯೋಗಿಯಾಗಿದ್ದಾರೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



**ಶ್ರೀ ಕೆ. ಸುಧಾಕರ ರಾವ್:** ಮೂಲತ ಕಾಪುವಿನವರಾದ ಇವರು ಬಿಎಸ್ಸಿ ಹಾಗೂ ಕಾನೂನು ಪದವೀಧರರು. ಜೊತೆಗೆ ಇಂಡಿಯನ್ ಇನ್ಶ್ಯೂರೆನ್ಸ್ ಇನ್ಸ್ಟಿಟ್ಯೂಟ್‌ನಿಂದ ಡಿಪ್ಲೋಮಾ ಪದವಿಯನ್ನು ಪಡೆದಿದ್ದಾರೆ. ಎಲ್.ಐ.ಸಿಯಲ್ಲಿ ಡಿವಿಷನಲ್ ಮೆನೇಜರ್ ಹುದ್ದೆಯಲ್ಲಿದ್ದು ನಿವೃತ್ತರಾದವರು. ನಮ್ಮ ಸಂಘಕ್ಕೆ ಈ ಹಿಂದೆ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಉಡುಪಿ ಇದರ ನೂತನ ಆಡಳಿತ ಮಂಡಳಿಗೆ ಶಾರದಾ ಬಳಗವು ಶುಭ ಹಾರೈಸುತ್ತದೆ.

## ಶ್ರೀ ಎನ್.ಕೆ.ಜಗನ್ನಿವಾಸ ರಾಯರಿಗೆ ಸನ್ಮಾನ



ನಮ್ಮ ಸಮಾಜದ ಹಿರಿಯರಾದ ಶ್ರೀ ಎನ್. ಕೆ. ಜಗನ್ನಿವಾಸ ರಾವ್ ವೃತ್ತಿಯಲ್ಲಿ ವಕೀಲರಾಗಿ ಪ್ರವೃತ್ತಿಯಲ್ಲಿ ಸಮಾಜ ಸೇವಕರಾಗಿ, ಶೈಕ್ಷಣಿಕವಾಗಿ, ಧಾರ್ಮಿಕವಾಗಿ ತಮ್ಮ ಕಾರ್ಯದಕ್ಷತೆಯ ಮೂಲಕ ಸಮಾಜದಲ್ಲಿ ಗುರುತಿಸಲ್ಪಟ್ಟಿದ್ದಾರೆ. ಅವರು ಸಲ್ಲಿಸಿರುವ ಸೇವೆಯನ್ನು ಮನಗಂಡ ಕರ್ನಾಟಕ ಸರ್ಕಾರವು ಇವರನ್ನು ರಾಜ್ಯ ಧಾರ್ಮಿಕ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಿರುತ್ತದೆ. ಇವರನ್ನು ಸ್ಥಾನಿಕ ಬ್ರಾಹ್ಮಣ ಸಂಘ, ಸುರತ್ಕಲ್ ಇದರ ವತಿಯಿಂದ ತಾ.28-06-2015ನೇ ರವಿವಾರ ದಂದು ಸುರತ್ಕಲ್ ಇಡ್ಯಾ ವಿವೇಕಾನಂದ ಸಭಾಗೃಹದಲ್ಲಿ ಸನ್ಮಾನಿಸಲಾಯಿತು. ವೇದಿಕೆ ಯಲ್ಲಿ ಶ್ರೀ ಜಗನ್ನಿವಾಸ ರಾವ್, ಸಭಾಧ್ಯಕ್ಷರಾದ ಶ್ರೀ ಜೆ.ಪ್ರಭಾಕರ ರಾವ್, ಶ್ರೀ ಎಮ್.ಆರ್. ವಾಸುದೇವ, ಸಂಘದ ಅಧ್ಯಕ್ಷರಾದ ಶ್ರೀ ಕೆ. ಮಾಧವ ರಾವ್, ಗೌರವಾಧ್ಯಕ್ಷರಾದ ಶ್ರೀ ಎಮ್.ಭವಾನಿಶಂಕರ್ ರಾವ್, ಮಹಿಳಾ ವೇದಿಕೆಯ ಅಧ್ಯಕ್ಷೆ ಶ್ರೀಮತಿ ಪರಿಮಳಾ ಪ್ರಶಾಂತ್ ಉಪಸ್ಥಿತರಿದ್ದರು. ಸಂಘದ ಉಪಾಧ್ಯಕ್ಷರಾದ ಶ್ರೀ ಗೋಪಾಲಕೃಷ್ಣರವರ ಪ್ರಾರ್ಥನೆಯ ನಂತರ ಕೋಶಾಧಿಕಾರಿಗಳಾದ ಶ್ರೀ ಸಿ.ರಾಘವೇಂದ್ರ ರಾವ್‌ರವರು ಸ್ವಾಗತಿಸಿದರು. ಸಂಘಟನಾ ಕಾರ್ಯದರ್ಶಿ ಶ್ರೀ ಫಾಲಚಂದ್ರ ಶರ್ಮರವರು ವಿಷಯ ಪ್ರಸ್ತಾವನೆ ಮಾಡಿದರು. ಇನ್ನೋರ್ವ ಸಂಘಟನಾ ಕಾರ್ಯದರ್ಶಿ ಶ್ರೀ ವಾಸುದೇವ ಶ್ಯಾನುಭಾಗರು ಸನ್ಮಾನಪತ್ರ ವಾಚಿಸಿದರು. ಸಭಾಧ್ಯಕ್ಷರಾದ ಶ್ರೀ ಕೆ. ಪ್ರಭಾಕರ ರಾವ್‌ರವರು ಗಣ್ಯರ ಸಮ್ಮುಖದಲ್ಲಿ ಶ್ರೀ ಎನ್.ಕೆ. ಜಗನ್ನಿವಾಸ ರಾಯರಿಗೆ ಶಾಲು ಹೊದಿಸಿ ಹಾರ ಹಾಕಿ ಸ್ಮರಣಿಕೆ ಹಾಗೂ ಫಲ ಪುಷ್ಪಗಳನ್ನು ನೀಡಿ ಸನ್ಮಾನಿಸಿದರು. ಸನ್ಮಾನವನ್ನು ಸ್ವೀಕರಿಸಿ ಶ್ರೀ ಎನ್.ಕೆ. ಜಗನ್ನಿವಾಸ ರಾಯರು ತಾವು ಈ ಉನ್ನತ ಸ್ಥಾನಕ್ಕೆ ಬರಬೇಕಾದರೆ ಶ್ರೀ ಮಹಾಲಿಂಗೇಶ್ವರ ದೇವರ ಅನುಗ್ರಹ ಹಾಗೂ ತಮ್ಮೆಲ್ಲರ ಆಶೀರ್ವಾದವೇ ಕಾರಣವೆಂದರು. ಹಾಗೂ ದೇವಾಲಯಗಳಲ್ಲಿ ಭಕ್ತಾದಿಗಳಿಗೆ ಉತ್ತಮ ಸೇವೆ ದೊರೆಯಲು ಪ್ರಯತ್ನಿಸುವುದಾಗಿ ತಿಳಿಸಿದರು. ಶ್ರೀ ಕೆ. ಮಾಧವ ರಾವ್‌ರವರು ದೇವಾಲಯದ ನೌಕರರಿಗೆ ನೀಡಬೇಕಾದ ಸೌಲಭ್ಯಗಳ ಬಗ್ಗೆ ಬೇಡಿಕೆಗಳನ್ನು ಶ್ರೀಯುತರಿಗೆ ಅರ್ಪಿಸಿದರು. ನಂತರ ಅತಿಥಿಗಳಾದ ಶ್ರೀ ಎಮ್.ಆರ್.ವಾಸುದೇವರಾವ್ ಹಾಗೂ ಅಧ್ಯಕ್ಷರಾದ ಶ್ರೀ ಪ್ರಭಾಕರ್‌ರಾವ್‌ರವರು ಜಗನ್ನಿವಾಸರಾಯರ ಕಾರ್ಯದಕ್ಷತೆಯನ್ನು ಕೊಂಡಾಡಿದರು. ಶ್ರೀಮತಿ ಪರಿಮಳ ಪ್ರಶಾಂತ್‌ರವರು ಧನ್ಯವಾದವನ್ನು ಅರ್ಪಿಸಿದರು. ಸಂಘದ ಕಾರ್ಯದರ್ಶಿಗಳಾದ ಯು.ಎಮ್.ಸುಕುಮಾರ ರಾವ್ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದ ಸಂದರ್ಭದಲ್ಲಿ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಎಲ್ಲಾ ದೇವಾಲಯಗಳ ವತಿಯಿಂದ ಹಾರಾರ್ಪಣೆ ನಡೆಯಿತು.

## ಡಾ। ವೈ. ಅವನೀಂದ್ರನಾಥ್ ರಾವ್ ಅವರಿಗೆ ಅಭಿನಂದನೆ



ಸಾಹಿತಿ ಮತ್ತು ಕಲಾವಿದರ ವೇದಿಕೆ, ಬೆಂಗಳೂರು ಹಾಗೂ ಕನ್ನಡ ಭಾರತಿ, ನವದೆಹಲಿ ಆಯೋಜಿಸಿದ ಸಮಾರಂಭದಲ್ಲಿ ಲೇಖಕ ಡಾ। ವೈ. ಅವನೀಂದ್ರನಾಥ್ ರಾವ್ ಅವರನ್ನು ಅಭಿನಂದಿಸಲಾಯಿತು.

ದಿನಾಂಕ 21.06.2015ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ''ಕನ್ನಡ-ಕರ್ನಾಟಕಕ್ಕೆ ಘನತೆ ತಂದವರಿಗೆ ಅಭಿನಂದನೆ'' ಕಾರ್ಯಕ್ರಮದಲ್ಲಿ ಡಾ.ರಾವ್ ಅವರಿಗೆ ಈ ಗೌರವ ಸಂದಿದೆ. ಪ್ರತಿಷ್ಠಿತ ದೆಹಲಿ ಕರ್ನಾಟಕ ಸಂಘದ ಕೋಶಾಧಿಕಾರಿಯಾಗಿರುವ ರಾವ್ ಅವರು ಸಂಸ್ಕೃತಿ ಸಚಿವಾಲಯದಲ್ಲಿ ಅಧಿಕಾರಿಯಾಗಿದ್ದಾರೆ.

ಕನ್ನಡ ಮತ್ತು ಸಂಸ್ಕೃತಿ ಸಚಿವೆ ಶ್ರೀಮತಿ ಉಮಾಶ್ರೀ ಅಧ್ಯಕ್ಷತೆಯಲ್ಲಿ ಜರಗಿದ ಈ ಕಾರ್ಯಕ್ರಮದಲ್ಲಿ ಸಮಿತಿಯ ಇತರ ಪದಾಧಿಕಾರಿಗಳನ್ನು ಗೌರವಿಸಲಾಯಿತು. ನ್ಯಾಯಮೂರ್ತಿ ಎ.ಜೆ. ಸದಾಶಿವ, ನಿರ್ದೇಶಕ ಟಿ.ಎಸ್.ನಾಗಾಭರಣ, ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ನಾಡೋಜ ಶ್ರೀಮತಿ ಬಿ.ಕೆ. ಸುಮಿತ್ರ, ಮಾಜಿ ಸಭಾಪತಿ ವಿ. ಆರ್. ಸುದರ್ಶನ್, ಕಲಾವಿದ ಎಂ.ವಿ. ನಾರಾಯಣ ರಾವ್ ಉಪಸ್ಥಿತರಿದ್ದರು.

# ಸಂಪಾದಕೀಯ.....

- ಡಾ। ವೈ. ಸುದರ್ಶನ್ ರಾವ್

ಒಗ್ಗಟ್ಟು ಇಂದಿನ ಅಗತ್ಯ. ವೃತ್ತಿ, ಹವ್ಯಾಸ, ಎದುರಿಸುತ್ತಿರುವ ಸಮಸ್ಯೆಗಳು ಇತ್ಯಾದಿ ವಿಷಯಗಳನ್ನು ಮುಂದಿಟ್ಟುಕೊಂಡು ಸಂಘಟನೆಗಳನ್ನು ಸ್ಥಾಪಿಸಿ ಒಗ್ಗಟ್ಟಾಗಿ ಸಮಸ್ಯೆಗಳ ವಿರುದ್ಧ ಹೋರಾಡುವುದು ಹೊಸ ವಿಚಾರವೇನಲ್ಲ. ನಮ್ಮ ಹಿರಿಯರು ಜಾತಿ ಎಂಬ ಸಂಘಟನೆಯನ್ನು ಬೆಳೆಸಿದ್ದು ಒಂದೇ ಸಂಸ್ಕೃತಿಯ, ಆಹಾರ ಪದ್ಧತಿಯ , ವೃತ್ತಿಯ ಹಾಗೂ ಸ್ವಭಾವದ ಜನರು ಒಂದು ಛತ್ರದಡಿ ಒಂದಾಗಲಿ ಎಂಬ ಉದ್ದೇಶದಿಂದ. ಆದರೆ ಅದರಲ್ಲಿ ಅಸಮಾನತೆ, ಮೇಲುಕೀಳು ಹಾಗೂ ಅಸ್ಪೃಶ್ಯತೆ ಗಳೆಂಬ ಭಾವನೆಗಳು ನುಸುಳಿ ಜಾತಿ ಪದ್ಧತಿಗೆ ಮಸಿಮೆತ್ತಿದವು. ನಾವಿಂದು ಇಪ್ಪತ್ತೊಂದನೆಯ ಶತಮಾನದಲ್ಲಿದ್ದೇವೆ. ಸಮಾಜದ ಎಲ್ಲಾ ವರ್ಗದ ಜನರೊಂದಿಗೆ ಒಡನಾಟದಲ್ಲಿದ್ದೇವೆ. ತಾವು ಶ್ರೇಷ್ಠರೆಂದು ಭಾವಿಸುವವರ ಶ್ರೇಷ್ಠತನ ಇಂದವನ ಜಾತಿಯ ಮೇಲೆ ನಿರ್ಧಾರವಾಗುತ್ತಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಅಂತೆಯೇ ನೆರೆಕರೆಯವರು, ಗೆಳೆಯರು ಇನ್ನೂ ಮುಖ್ಯವಾಗಿ ವೈವಾಹಿಕ ಸಂಬಂಧಗಳಲ್ಲಿ ಒಂದೇ ಸಂಸ್ಕೃತಿ, ಆಹಾರ ವಿಚಾರಗಳಿರುವವನು ಜೊತೆಯಾದರೆ ಪರಸ್ಪರ ಹೊಂದಾಣಿಕೆ ಸುಲಭವಾಗುವುದು ಖಂಡಿತಾ ಎಂಬುದೂ ಎಲ್ಲರೂ ಒಪ್ಪುವ ವಿಚಾರವಾಗಿದೆ. ಸಾವಿನಂತಹಾ ಕಷ್ಟಕಾಲದಲ್ಲಿ ಸಹಾಯಕ್ಕೆ ಧಾವಿಸುವುದೂ ಇಂತಹಾ ಸಂಘಟನೆಗಳೇ. ಹಾಗಾಗಿ ಇಂದು ಸಮಾಜದ ಸದಸ್ಯರಿಗೆ ಒಬ್ಬರಿಗೊಬ್ಬರು ಸಹಾಯಮಾಡುವ ಉದ್ದೇಶವನ್ನಿಟ್ಟುಕೊಂಡು ಜಾತಿಯ ಹೆಸರಿನಲ್ಲಿ ಸಂಘಟನೆಗಳು ಕೆಲಸಮಾಡುತ್ತಿವೆ. ಹಾಗಾಗಿ ನಮ್ಮ ಸಮಾಜದ ವಿದ್ಯಾವಂತರು ಹಾಗೂ ಸಮಾಜದಲ್ಲಿ ಉನ್ನತ ಸ್ಥಾನದಲ್ಲಿ ಗುರುತಿಸಿಕೊಂಡವರು ಹಾಗೂ ಯುವಜನತೆ ನಮ್ಮ ಸ್ಥಾನಿಕ ಬ್ರಾಹ್ಮಣ ಜಾತಿಯ ಹೆಸರಿನಲ್ಲಿರುವ ಸಂಘಟನೆಗಳಲ್ಲಿ ಸಕ್ರಿಯರಾಗಿ ಪಾಲ್ಗೊಂಡು ಅದರಲ್ಲಿ ಹೊಸ ಚಿಂತನೆಗಳನ್ನು ತುಂಬಿಸಬೇಕಾದ ಕಾಲ ಬಂದಿದೆ.

ಮನೆಗೆ ಬೇಕಾದ ತರಕಾರಿಯನ್ನೂ ಸಹಾ ಅಂತರ್ಜಾಲದ ಮೂಲಕ ತರಿಸಿಕೊಳ್ಳುತ್ತಿರುವ ದಿನಗಳಿವು. ಗಂಡ ಹೆಂಡತಿ ಇಬ್ಬರೂ ವಾರವಿಡೀ ಆಫೀಸಿನಲ್ಲಿ ದುಡಿದು ಸಿಕ್ಕಿದ ಆದಿತ್ಯವಾರದ ರಜೆಯಲ್ಲಿ ಮನೆಕೆಲಸ ಹಾಗೂ ಸ್ವಂತಕೆಲಸ ಮುಗಿಸಿ ಉಸಿರುಬಿಡುವಷ್ಟರಲ್ಲಿ ಸೋಮವಾರ ಬಂದಿರುತ್ತದೆ. ಸಂಬಂಧಿಗಳ ಮನೆಗೆ ಭೇಟಿ ನೀಡಲು ಸಮಯ ಸಿಗದ ನಮಗೆ ಜಾತಿ ಸಂಘಟನೆಗಾಗಿ ಒಟ್ಟಾಗುವುದು, ಅದಕ್ಕಾಗಿ ಅಷ್ಟೊಂದು ದೂರ ಪ್ರಯಾಣಿಸುವುದು ಇಂದಿನ ಧರಾಟೆಯ ಯುಗದಲ್ಲಿ ಕಾರ್ಯಸಾಧುವೆಂದೆನಿಸುತ್ತಿಲ್ಲ. ಹಾಗಾಗಿ ನಮ್ಮ ಸಂಘಟನೆಯನ್ನು ಅಂತರ್ಜಾಲದ ಮೂಲಕ ಬೆಳೆಸಿಕೊಳ್ಳುವ ಪ್ರಯತ್ನಕ್ಕೆ ನಮ್ಮವರು ಕೈಹಾಕಿದ್ದಾರೆ ಅವರ ದೂರದರ್ಶಿತ್ವವನ್ನು ಎಷ್ಟು ಹೊಗಳಿದರೂ ಸಾಲದು. ಬೆಂಗಳೂರಿನ ಶ್ರೀ ಶಂಕರನಾರಾಯಣ ರಾವ್ ಕರ್ವಾಲ್, ಶ್ರೀ ಬಪ್ಪನಾಡು ದಿನಮಣಿ ಶಾಸ್ತ್ರಿ, ಶ್ರೀ ರವಿಪ್ರಸಾದ ಶರ್ಮ ಕೇದಿಗೆ, ಶ್ರೀ ಬೈಲೂರು ಬಾಲಚಂದ್ರ ರಾವ್, ಶ್ರೀ ವೇಣುಗೋಪಾಲ ರಾವ್ ಅಂಬಲ್ಪಾಡಿ, ಶ್ರೀ ಸುಬ್ರಾಯ ಉಬರಳೆ ಹಾಗೂ ಇತರರು ಸ್ಥಾನಿಕ ವೃಕ್ಷ ಎಂಬ ಹೆಸರಿನಲ್ಲಿ ಅಂತರ್ಜಾಲದಲ್ಲಿ ಸ್ಥಾನಿಕ ಬ್ರಾಹ್ಮಣರೆಲ್ಲರ ಹೆಸರು, ಲಿಂಗ, ವಯಸ್ಸು, ಕುಟುಂಬದ ಹೆಸರು ಹೀಗೆ ಬಹಿರಂಗಪಡಿಸ ಬಹುದಾದ ಮಾಹಿತಿಗಳನ್ನು ಪಡೆದುಕೊಂಡು ಪರಸ್ಪರರಿಗಿರುವ ಸಂಬಂಧವನ್ನು ಪೋಣಿಸುವ ಕೆಲಸ ಮಾಡುತ್ತಿದ್ದಾರೆ. ಈ ಕೆಲಸ ಸಂಪೂರ್ಣ ವಾದ ಮೇಲೆ ನಮ್ಮವರು ಯಾರು ಬೇಕಾದರು ಈ ಮಾಹಿತಿಯನ್ನು ಕುಳಿತಲ್ಲೆ ಅಂತರ್ಜಾಲದಲ್ಲಿ ಪಡೆಯಬಹುದು. ತಮಗೂ ಇನ್ನೊಬ್ಬರಿಗೂ ಇರುವ ಸಂಬಂಧದ ಎಳೆಗಳನ್ನು ತಿಳಿಯಬಹುದು. ಕುಳಿತಲ್ಲೆ ತಮ್ಮೆಲ್ಲಾ ಸಂಬಂಧಿಕರಿಗೆ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬಹುದು. ಪರಸ್ಪರರ ಹುಟ್ಟು ಹಬ್ಬದಂತಹಾ ಶುಭದಿನಗಳನ್ನು ಇದು ನೆನಪಿಸುತ್ತದೆ. ಹೀಗೆ ಬಹೂಪಯೋಗಿಯಾಗಬಲ್ಲ ಈ ಪ್ರಯತ್ನವನ್ನು ನಾವೆಲ್ಲರೂ ಬೆಂಬಲಿಸಲೇಬೇಕು.

ಉಡುಪಿಯ ಸ್ಥಾನಿಕ ಬಾಂಧವರಲ್ಲಿ ಹಾಗೂ ಈ ಪತ್ರಿಕೆಯ ಓದುಗರಲ್ಲಿ ಒಂದು ವಿನಂತಿಯಿದೆ. ಪ್ರತಿಯೊಂದು ಕುಟುಂಬದಲ್ಲಿ ಯಾರಾದರೊಬ್ಬರು ಮುತುವರ್ಜಿ ವಹಿಸಿ ಆದಷ್ಟು ತಮ್ಮೆಲ್ಲಾ ಕುಟುಂಬಸ್ಥರ ಸರಿಯಾದ ಹೆಸರು, ನಿಧನರಾಗಿದ್ದರೆ ಅದನ್ನೂ ಸೂಚಿಸಿ, ವಯಸ್ಸು, ಫೋನ್ ಸಂಖ್ಯೆ, ಇ-ಮೇಲ್ ವಿಳಾಸ, ವೃತ್ತಿ, ಮದುವೆಯಾಗಿ ಕುಟುಂಬಕ್ಕೆ ಸೇರ್ಪಡೆಯಾದವರ ತಂದೆ-ತಾಯಿ ಹಾಗೂ ಊರಿನ ಹೆಸರನ್ನೆಲ್ಲಾ ಕಲೆಹಾಕಿ ವಂಶವೃಕ್ಷದ ರೂಪದಲ್ಲಿ ಬರೆದು ದಯವಿಟ್ಟು ಶ್ರೀ ಶಾರದಾ ಮಂಟಪಕ್ಕೆ ತಲುಪಿಸಬೇಕೆಂದು ಕೇಳಿಕೊಳ್ಳುತ್ತೇವೆ. ಅದರೊಂದಿಗೆ ತಮ್ಮ ಫೋನ್ ಸಂಖ್ಯೆಯನ್ನು ತಿಳಿಸಿದರೆ ಅಂತರ್ಜಾಲದಲ್ಲಿ ಈ ಮಾಹಿತಿಯನ್ನು ಬರೆಯುವಾಗ ಯಾವುದಾದರು ಸಂಶಯವಿದ್ದರೆ ವಿಚಾರಿಸಲು ಅನುಕೂಲವಾಗುತ್ತದೆ.

ಶ್ರೀ ಶಂಕರನಾರಾಯಣ ರಾವ್ ಕರ್ವಾಲು ಹಾಗೂ ಅವರ ತಂಡದವರ ಈ ಸಮಾಜಮುಖೀ ಕಾರ್ಯಕ್ಕೆ ಎಲ್ಲರೂ ಬೆಂಬಲ ನೀಡುವಿರೆಂದು ಭಾವಿಸುತ್ತೇವೆ.

**ಸಂಪಾದಕ ಮಂಡಳಿ**


ಡಾ। ವೈ. ಸುದರ್ಶನ ರಾವ್, ಕುಕ್ಕಿಕಟ್ಟೆ
ಶ್ರೀ ವೈ. ಮೋಹನ್ ರಾವ್, ಬ್ರಹ್ಮಗಿರಿ
ಶ್ರೀ ಹೆಚ್.ಎನ್.ಶ್ಯಾನುಭಾಗ್, ಅಂಬಲ್ಪಾಡಿ
ಶ್ರೀ ಟಿ. ಸುರೇಶ್ ರಾವ್, ನಿಟ್ಟೂರು
ಶ್ರೀ ವೈ. ಪ್ರಕಾಶ್ ಕುಮಾರ್, ಕುಕ್ಕಿಕಟ್ಟೆ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನ ಹಾಗೂ ವೈಯಕ್ತಿಕ ಜಾಹೀರಾತುಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಹಾಗೂ ಜಾಹೀರಾತುದಾರರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯ ವಾಗಿರಬೇಕಾಗಿಲ್ಲ. ಲೇಖನಗಳನ್ನು, ಸುದ್ದಿಗಳನ್ನು ಮತ್ತು ಜಾಹೀರಾತುಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

# ಆರ್ಷ ಪರಂಪರೆಯ ಪರಮೋಚ್ಚ ಪ್ರತಿನಿಧಿ ಯೋಗಿವರೇಣ್ಯ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

- ಡಾ। ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಸಂಸ್ಕೃತ ಪ್ರಾಧ್ಯಾಪಕರು
ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ



ಲೋಕಗುರು ಶ್ರೀ ಆದಿಶಂಕರಾಚಾರ್ಯರು ಸ್ಥಾಪಿಸಿದ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಅವಿಚ್ಛಿನ್ನ ಗುರು ಪರಂಪರೆಯಲ್ಲಿ ಮೂವತ್ನಾಲ್ಕನೆಯವರಾದ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಜೀವನ್ಮುಕ್ತ ಯೋಗಿವರೇಣ್ಯರು. ಆತ್ಮಧ್ಯಾನ ನಿರತರೂ, ವಿಷಯ ಪರಾಙ್ಮುಖರೂ, ಶಾಸ್ತ್ರ ನಿಷ್ಣಾತರೂ ಆದ ಅವರು ಪವಿತ್ರ ಭಾರತದ ಆರ್ಷಪರಂಪರೆಯ ಪರಮೋಚ್ಚ ಪ್ರತಿನಿಧಿಗಳು.

**ಬಾಲ್ಯ ಜೀವನ**

ಪುಣ್ಯಕ್ಷೇತ್ರ ಶೃಂಗೇರಿಯಲ್ಲೇ ಹುಟ್ಟಿ ಬೆಳೆದ ಅವರ ಪೂರ್ವಾಶ್ರಮದ ಹೆಸರು ನರಸಿಂಹ. ತಂದೆ ಗೋಪಾಲ ಶಾಸ್ತ್ರಿ. ತಾಯಿ ಲಕ್ಷ್ಮಮ್ಮ. ಇವರದು ಗಾರ್ಗ್ಯಸ ಗೋತ್ರ; ಆಪಸ್ತಂಭ ಸೂತ್ರ. ಗೋಪಾಲ ಶಾಸ್ತ್ರಿ ದಂಪತಿಗಳಿಗೆ ಹುಟ್ಟಿದ ಮಕ್ಕಳೆಲ್ಲ ತೀರಿ ಹೋಗಿ, ಅವರ ಪೂರ್ವ ಜನ್ಮದ ಸುಕೃತ ವಿಶೇಷದಿಂದ ಕೊನೆಯವನಾದ ನರಸಿಂಹ ಮಾತ್ರ ಉಳಿದುಕೊಂಡ. 1892ರ ಅಕ್ಟೋಬರ್ 16ರಂದು ಜನ್ಮತಳೆದ ಪುತ್ರರತ್ನ ಇವರು.

ಪ್ರತಿನಿತ್ಯ ತಂದೆ-ತಾಯಿಗಳ ಜತೆ ಗುರುಗಳ ಮತ್ತು ಶಾರದಾಂಬೆಯ ದರ್ಶನಕ್ಕೆ ಹೋಗುತ್ತಿದ್ದ ನರಸಿಂಹ 'ಅಭಿನವ ಶಂಕರ'ರೆಂದೇ ಪ್ರಸಿದ್ಧರಾದ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಮಹಾಸ್ವಾಮಿಗಳವರ ಗಮನ ಸೆಳೆದರು. ಶೃಂಗೇರಿಯ ಸರಕಾರಿ ಮಾಧ್ಯಮಿಕ ಶಾಲೆಯಲ್ಲಿ ಏಳನೇ ತರಗತಿಯವರೆಗೆ ಓದಿದ್ದ ಅವರನ್ನು ಶೃಂಗೇರಿಯಲ್ಲಿ ತಾನೇ ಸ್ಥಾಪಿಸಿರುವ 'ಸದ್ವಿದ್ಯಾಸಂಜೀವಿನೀ ಸಂಸ್ಕೃತ ಪಾಠಶಾಲೆ'ಗೆ ಸೇರಿಸಬೇಕೆಂಬುದು ಜಗದ್ಗುರುಗಳವರ ಆಶಯವಾಗಿತ್ತು. ಆದ್ದರಿಂದ ಅವರು ತಮ್ಮ ದರ್ಶನಕ್ಕೆ ಬಂದಿದ್ದ ಗೋಪಾಲಶಾಸ್ತ್ರಿಗಳ ಬಳಿ 'ನರಸಿಂಹನನ್ನು ಲೌಕಿಕ ವಿದ್ಯೆಯ ಆಂಗ್ಲ ಶಾಲೆಗೆ ಕಳುಹುವುದು ಬೇಡ. ನಮ್ಮ ಮಠದ ಶಾಲೆಯಲ್ಲಿ ಅವನು ವೈದಿಕ ವಿದ್ಯೆಯನ್ನು ಅಭ್ಯಾಸಮಾಡಲಿ' ಎಂದರು.

ಜಗದ್ಗುರು ಮಹಾಸ್ವಾಮಿಗಳವರ ಕೃಪಾದೃಷ್ಟಿಗೆ ಪಾತ್ರರಾದ ನರಸಿಂಹನವರ ವೈದಿಕ ವಿದ್ಯಾಭ್ಯಾಸ ಶ್ರೀಮಠದ ಸದ್ವಿದ್ಯಾ ಸಂಜೀವಿನೀ ಪಾಠಶಾಲೆಯಲ್ಲಿ ಆರಂಭವಾಗಿ, ತರ್ಕಶಾಸ್ತ್ರದ ಅಧ್ಯಯನವನ್ನು ಮುಗಿಸಿದರು. ನಂತರ ಜಗದ್ಗುರುಗಳವರ ಸಂಕಲ್ಪದಂತೆ ಬೆಂಗಳೂರು ಶಂಕರ ಮಠದಲ್ಲಿ ಅವರೇ ಸ್ಥಾಪಿಸಿದ 'ಗೀರ್ವಾಣ ಪ್ರೌಢವಿದ್ಯಾಭಿವರ್ಧಿನೀ ಪಾಠಶಾಲೆ'ಯಲ್ಲಿ ಮಹಾಮಹೋಪಾಧ್ಯಾಯ ವೆಳ್ಳೂರು ಸುಬ್ರಹ್ಮಣ್ಯ ಶಾಸ್ತ್ರಿಗಳು ಮತ್ತು ವೈದ್ಯನಾಥ ಶಾಸ್ತ್ರಿಗಳಂತಹ ಘನತೆವೆತ್ತ ವಿದ್ವಾಂಸರ ಸನ್ನಿಧಿಯಲ್ಲಿ ಶಾಸ್ತ್ರಾಧ್ಯಯನ ಮಾಡಿ, ಬಹಳ ದೊಡ್ಡ ವಿದ್ವಾಂಸರಾದ ನರಸಿಂಹ ನಿಜವಾದ ಅರ್ಥದಲ್ಲಿ ಶಾಸ್ತ್ರಿಯೇ ಆದರು.

**ಸಂನ್ಯಾಸ ಗ್ರಹಣ**

ಆಗ ತಾನೇ ದಕ್ಷಿಣ ಭಾರತದ ಯಾತ್ರೆ ಮುಗಿಸಿ ಬಂದಿದ್ದ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳ ಆರೋಗ್ಯ ದಿನೇ-ದಿನೇ ಕ್ಷೀಣಿಸ ತೊಡಗಿತು. ಸ್ಥಿರಸಂಕಲ್ಪರಾದ ಅವರು ತಮ್ಮ ಉತ್ತರಾಧಿಕಾರಿ ನರಸಿಂಹ ಶಾಸ್ತ್ರಿಯೆಂದು ಈಗಾಗಲೇ ತೀರ್ಮಾನಿಸಿದ್ದರು. ಈ ವಿಚಾರವನ್ನು ಮಠದ ಅಧಿಕಾರಿಗಳಿಗೆ ಮತ್ತು ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ತಿಳಿಸಿದರು. ಬೆಂಗಳೂರಿನಲ್ಲಿ ತಂದೆ-ತಾಯಿಗಳೊಂದಿಗೆ ವಾಸಮಾಡಿಕೊಂಡಿದ್ದ ನರಸಿಂಹ ಶಾಸ್ತ್ರಿಗಳನ್ನು ಜಗದ್ಗುರುಗಳವರ ಅಪೇಕ್ಷೆಯಂತೆ ಶೃಂಗೇರಿಗೆ ಕರೆತರಲು ಕುಣಿಗಲ್ ರಾಮಶಾಸ್ತ್ರಿಗಳು ತೆರಳಿದರು. ತಮ್ಮ ಏಕಮಾತ್ರ ಪುತ್ರ ಸಂನ್ಯಾಸ ಸ್ವೀಕರಿಸಬೇಕೆಂಬ ಸುದ್ದಿ ಕೇಳಿ, ಗೋಪಾಲ ಶಾಸ್ತ್ರಿಗಳು ಮತ್ತು ಲಕ್ಷ್ಮಮ್ಮನವರು ವಿಚಲಿತರಾದರು. ದುಃಖತಪ್ತರಾದರೂ ಹೇಗೋ ಸಮಾಧಾನ ಮಾಡಿಕೊಂಡು ಗುರುಗಳ ಆಜ್ಞೆ ಶಿರೋಧಾರ್ಯವೆಂದು ತಮ್ಮ ಒಪ್ಪಿಗೆ ನೀಡಿದರು.

ಕುಣಿಗಲ್ ರಾಮಶಾಸ್ತ್ರಿಗಳ ಜತೆ ಬೆಂಗಳೂರಿಂದ ಹೊರಟ ನರಸಿಂಹಶಾಸ್ತ್ರಿಗಳು ಶೃಂಗೇರಿಗೆ ತಲುಪುವ ಮೊದಲೇ ಜಗದ್ಗುರು ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಸ್ವಾಮಿಗಳು ತಮ್ಮ ಪಂಚಭೌತಿಕ ದೇಹವನ್ನು ತ್ಯಜಿಸಿದ್ದರು. ವಿದೇಹ ಮುಕ್ತರಾದ ಅವರ ಆರಾಧನಾದಿ ವೈದಿಕ ಕಾರ್ಯಗಳೆಲ್ಲ ಮುಗಿದ ನಂತರ 1912ರ ಏಪ್ರಿಲ್4 ರಂದು ನರಸಿಂಹ ಶಾಸ್ತ್ರಿಗಳು ಶಾಸ್ತ್ರೋಕ್ತವಾಗಿ ಸಂನ್ಯಾಸ ಸ್ವೀಕರಿಸಿ 'ಚಂದ್ರಶೇಖರ ಭಾರತೀ' ಎಂಬ ಅಭಿಧಾನದೊಂದಿಗೆ ಶೃಂಗೇರಿ ಶ್ರೀ ಶಾರದಾ ಪೀಠದ ಮೂವತ್ತ ನಾಲ್ಕನೇಯ ಅಧಿಪತಿಗಳಾಗಿ ಪಟ್ಟಾಭಿಷಿಕ್ತರಾದರು.

**ಅವಧೂತವರಿಷ್ಠ** : (7ನೇ ಪುಟಕ್ಕೆ...)

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠಲ ರಾವ್ ಮುಂಬೈ, ಶ್ಯಾಮರಾವ್ ಆಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ , ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಳಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್, ಎಸ್.ಉಮೇಶ್ ರಾವ್ ಮಾಣಿಬೆಟ್ಟು, ಶ್ರೀಮತಿ ಸವಿತಾ ಮೋಹನ್‌ರಾವ್ ಕಬ್ಯಾಡಿ, ಪ್ರಫುಲ್ಲಚಂದ್ರರಾವ್ ಉಡುಪಿ, ಕೃಷ್ಣಕುಮಾರ್‌ರಾವ್ ಮಟ್ಟು , ಚಿಟ್ಪಾಡಿ ಭುಜಂಗರಾವ್, ಕೋಲ್ಪೆ ಗೋಪಾಲಕೃಷ್ಣ ರಾವ್, ಯು.ಅರವಿಂದ ಕುಮಾರ್ ಮಣಿಪಾಲ, ಕಿಶೋರ್ ಭಾಸ್ಕರ್ ರಾವ್ ಮುಂಬಯಿ, ವೈ.ವಿಠಲರಾವ್ ಚಿಟ್ಪಾಡಿ, ಶ್ರೀ ಪ್ರವೀಣ್ ಕುಮಾರ್ ಬೆಳ್ಳೆ.



## ಹ್ಯಾಟ್ರಿಕ್ ಗೆಲುವು

ಇತ್ತೀಚೆಗೆ ನಡೆದ ಗ್ರಾಮ ಪಂಚಾಯತ್ ಚುನಾವಣೆಯಲ್ಲಿ ಬೀಜಾಡಿ ಗ್ರಾಮ ಪಂಚಾಯತ್‌ನಲ್ಲಿ ಬೀಜಾಡಿ ಕ್ಷೇತ್ರ ೧ ರಿಂದ ಕುಂದಾಪುರ ತಾಲೂಕು ಸ್ಥಾನಿಕ ಬ್ರಾಹ್ಮಣ ಸಂಘದ ಉಪಾಧ್ಯಕ್ಷರಾದ ಶ್ರೀಯುತ ರವೀಂದ್ರ ದೊಡ್ಮನೆಯವರು ಸತತವಾಗಿ ಮೂರನೇ ಬಾರಿ ಗೆಲ್ಲುವ ಮೂಲಕ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ. ಅಲ್ಲದೇ ಇವರು ಕೋಟೇಶ್ವರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಬಿಜೆಪಿ ಅಧ್ಯಕ್ಷರಾಗಿದ್ದಾರೆ. ಇವರಿಗೆ ಶಾರದಾ ಬಳಗದ ಅಭಿನಂದನೆಗಳು.

## ಅಗಲಿದ ಹಿರಿಯ ಚೇತನ ಅಡೂರು ಶ್ರೀಧರ ರಾವ್

ಪ್ರಸಿದ್ಧ ಯಕ್ಷಗಾನ ಕಲಾವಿದರು ಹಾಗೂ ಮುಖವರ್ಣಿಕೆ ರಚನಾಕಾರರಾದ ಶ್ರೀ ಅಡೂರು ಶ್ರೀಧರರಾಯರು ತಾ.22-06-2015ರ ಸೋಮವಾರದಂದು ಸ್ವಗೃಹ, ಕೆರೆಮೂಲೆಯ ಚಂದ್ರನಿವಾಸದಲ್ಲಿ ನಿಧನ ಹೊಂದಿದರು. ಅವರಿಗೆ ಸುಮಾರು 78ವರ್ಷ ಪ್ರಾಯವಾಗಿತ್ತು. ಇಂಜಿನಿಯರಿಂಗ್ ಪದವೀಧರರಾದ ಇವರು ಮುಂಬೈನ ಉದ್ಯೋಗವನ್ನು ತ್ಯಜಿಸಿ ಊರಿಗೆ ಮರಳಿದ ನಂತರ ಅಡೂರಿನಲ್ಲಿ ಶ್ರೀ ಮಹಾಲಿಂಗೇಶ್ವರ ಯಕ್ಷಗಾನ ಮಂಡಳಿಯನ್ನು ಮುನ್ನಡೆಸಿದರು. ಶ್ರೀ ಅಬ್ದುಲ್ ಕಲಾಂ ಹಾಗೂ ಶ್ರೀಎಸ್.ಎಂ.ಕೃಷ್ಣ ಇವರುಗಳೂ ಇವರ ಕಲಾ ಪ್ರೌಢಿಮೆಗೆ ಮೆಚ್ಚುಗೆ ಸೂಸಿದ್ದಾರೆ. ಇವರು ರಚಿಸಿದ ಅನೇಕ ಮುಖವರ್ಣಿಕೆಗಳು ದೇಶ ವಿದೇಶದ ಅನೇಕ ಸಂಗ್ರಹಾಲಯಗಳಲ್ಲಿ ಪ್ರದರ್ಶನಕ್ಕಿವೆ. ಜಾನಪದ ಯಕ್ಷಗಾನ ಅಕಾಡಮಿ ಪ್ರಶಸ್ತಿ, ಬಲಿಪ ಪ್ರಶಸ್ತಿ, ಕಲ್ಕೂರ ಪ್ರತಿಷ್ಠಾನ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಗಳು ಇವರಿಗೆ ಸಂದಿವೆ. ಇವರು ಮಕ್ಕಳಾದ ಡಾ। ಸಂತೋಷಕುಮಾರ್, ಡಾ। ಪ್ರಶಾಂತ ಕುಮಾರ್, ಶ್ರೀಮತಿ ಪೂರ್ಣಿಮಾ ಪಿ.ರಾವ್, ಶ್ರೀಮತಿ ಶರ್ಮಿಳಾ ಚಂದ್ರಮೋಹನ್ ಹಾಗೂ ಅಪಾರ ಬಂಧುಗಳು ಮತ್ತು ಅಭಿಮಾನಿಗಳನ್ನು ಅಗಲಿದ್ದಾರೆ. ನಮ್ಮ ಸಂಘದ ನಿಕಟ ಪೂರ್ವ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರರಾಯರು ಇವರ ಅಳಿಯ. ಶ್ರೀ ಶಾರದಾ ಬಳಗವು ನಮ್ಮ ಸಮಾಜದ ಹಿರಿಯ ಚೇತನ ಶ್ರೀ ಅಡೂರು ಶ್ರೀಧರರಾಯರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

## ಮೋದಿಯವರ ಬಗ್ಗೆ ಬಂದ ಪತ್ರಿಕಾ ವರದಿಗಳ ಆಲ್ಬಂ ರಚನೆ



ಕಡಬದ ನಿವೃತ್ತ ಶಿಕ್ಷಕ ಲೇಖಕ, ಕವಿ, ಕೆ.ಗೋಪಾಲರಾವ್ ಇವರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರು ಅಧಿಕಾರ ಸ್ವೀಕರಿಸಿದಂದಿನಿಂದ ಒಂದು ವರ್ಷದಲ್ಲಿ ಅವರ ಬಗ್ಗೆ ಬಂದ ಪತ್ರಿಕಾ ವರದಿಗಳ 4 ಆಲ್ಬಂ ರಚಿಸಿರುತ್ತಾರೆ. ಈ 4 ಆಲ್ಬಂ ಸುಮಾರು 800 ಪುಟಗಳದ್ದಾಗಿರುತ್ತದೆ.

ಶ್ರೀಯುತರು ಈ ಮೊದಲು ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಸ್ವಾಮೀಜಿ, ಸುಬ್ರಹ್ಮಣ್ಯ ಮಠದ ಶ್ರೀ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ, ಧರ್ಮಸ್ಥಳದ ಪದ್ಮವಿಭೂಷಣ ಡಾ।ಡಿ.ವೀರೇಂದ್ರ ಹೆಗ್ಗಡೆ; ಸಂಸದ ಶ್ರೀ ನಳಿನ್ ಕುಮಾರ್ ಕಟೀಲು; ಮಾಜಿ ಮುಖ್ಯ ಮಂತ್ರಿ ಶ್ರೀ ಡಿ.ವಿ.ಸದಾನಂದ ಗೌಡ; ವಿಶ್ವ ತುಳು ಸಮ್ಮೇಳನ; ಹಾಗೂ ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಿಂದ ಬ್ರಹ್ಮ ಕಲಶದ ವರೆಗಿನ ಆಲ್ಬಂ ರಚಿಸಿ ಅವರಿಗೆ ಅರ್ಪಿಸಿರುತ್ತಾರೆ.

ಎಲ್ಲರೂ ಇದೊಂದು ಮುಂದಕ್ಕೆ ದಾಖಲೆ ಎಂಬುದಾಗಿ ಹೇಳಿ ಸಂತೋಷದಿಂದ ಅಭಿನಂದಿಸಿರುತ್ತಾರೆ. ಸಾಮಾನ್ಯವಾಗಿ ಎಲ್ಲವೂ ಉದಯವಾಣಿ, ಮತ್ತು ವಿಜಯ ಕರ್ನಾಟಕದಲ್ಲಿ ಬಂದ ಪತ್ರಿಕಾ ವರದಿಗಳಾಗಿವೆ.

ಸಾಮಾನ್ಯವಾಗಿ ಎಲ್ಲರೂ ಇಂದಿನ ಪತ್ರಿಕೆ ಓದಿ ಮರುದಿನಕ್ಕೆ ಮೂಲೆಗೆಸೆಯುತ್ತಾರೆ. ಆದರೆ ಪತ್ರಿಕಾ ವರದಿಗಳಿಗೂ ಒಂದು ಸ್ಥಾನ ಮಾನವಿದೆ ಎಂಬುದನ್ನು ಕೆ. ಗೋಪಾಲ ರಾವ್ ತೋರಿಸಿ ಕೊಟ್ಟಿದ್ದಾರೆ. ಶ್ರೀಯುತರ ಮೊಬೈಲ್ ನಂ : 9740259698.

ವರದಿ : ಶ್ರೀಮತಿ ಪ್ರಮೀಳಾ. ಬಿಳಿನೆಲೆ

## ಒಂದೇ ವೇದಿಕೆಯಲ್ಲಿ ಕಲಾವಿದರಾದ ತಂದೆ ಮತ್ತು ಮಗನ ಸನ್ಮಾನ

ಕಡಬದ ನೃತ್ಯ ನಿನಾದದ ವತಿಯಿಂದ ಶ್ರೀಮತಿ ವಿದುಷಿ ಪ್ರಮೀಳಾ ಲೋಕೇಶ್ ಇವರ ನೇತೃತ್ವದಲ್ಲಿ ಬಿಳಿನೆಲೆಯ ಶ್ರೀ ಗೋಪಾಲಕೃಷ್ಣ ಸಭಾಭವನದಲ್ಲಿ ವಾರ್ಷಿಕೋತ್ಸವ ನಡೆಯಿತು. ನೂರಾರು ಶಿಷ್ಯವರ್ಗದವರಿಂದ 3 ಗಂಟೆ ಕಾಲ ಭರತನಾಟ್ಯ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ಜರುಗಿತು. ಮಂಗಳೂರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಭಾಗಿತ್ವವಿತ್ತು :- ಈ ಕಾರ್ಯಕ್ರಮದಲ್ಲಿ ಐದಾರು ಗ್ರಾಮಗಳಿಂದ ಸಾವಿರಾರು ಜನರು ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಕಡಬ, ಕುಂಭಾಟ್ ಗೋಪಾಲರಾವ್ ಇವರು ಬರೆದ 'ಭಕ್ತಸುಧಾಮ' ಎಂಬ ಗೀತಾನಾಟಕವನ್ನು ಭರತನಾಟ್ಯಕ್ಕೆ ರಾಗ ಸಂಯೋಜಿಸಿ ಅಭಿನಯಿಸಲಾಗಿತ್ತು. ಭರತನಾಟ್ಯಕ್ಕೆ ರಾಗ ಸಂಯೋಜನೆ ಮಾಡಿದವರು ಕೆ. ಗೋಪಾಲರಾವ್ ಇವರ ಪುತ್ರ. ಕೆ. ಶರತ್ ಕುಮಾರ್ ಬೆಂಗಳೂರು ಇವರು.

ಈ ನಾಟಕವನ್ನು ಪ್ರಥಮವಾಗಿ ನೃತ್ಯ ನಿನಾದ್ ತಂಡದವರು ದೆಹಲಿ ಕನ್ನಡ ಸಂಘದ ವಾರ್ಷಿಕೋತ್ಸವದಲ್ಲಿ ಪ್ರದರ್ಶಿಸಿ ಎಲ್ಲರಿಂದಲೂ ಮೆಚ್ಚುಗೆ ಪಡೆದಿದ್ದರು.ಅಲ್ಲದೆ ದ.ಕ.ಜಿಲ್ಲೆಯಲ್ಲೂ ಹಲವಾರು ಕಡೆ ನಡೆದ ಬ್ರಹ್ಮಕಲಶ ಸಂದರ್ಭ ಆಡಿ ತೋರಿಸಿದ್ದರು. ಬಿಳಿನೆಲೆಯಲ್ಲಿ ನಡೆದ ನೃತ್ಯ ನಿನಾದದವರ ವಾರ್ಷಿಕೋತ್ಸವ ಸಂದರ್ಭ ಕಲಾವಿದರಾದ ಶ್ರೀ.ಕೆ.ಗೋಪಾಲ ರಾವ್ ಮತ್ತು ಅವರ ಪುತ್ರ ಶ್ರೀ.ಕೆ.ಶರತ್ ಕುಮಾರ್ ಇವರನ್ನು ಪುತ್ತೂರಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿ ಪಡೆದ ನೃತ್ಯ ಗುರು ಶ್ರೀ ಕುದ್ಕಾಡಿ ವಿಶ್ವನಾಥ ರೈ ಸನ್ಮಾನಿಸಿದರು.

ವರದಿ : ಶ್ರೀಮತಿ ಪ್ರಮೀಳಸನತ್ ಕುಮಾರ್ ಬಿಳಿನೆಲೆ.

## ಯಕ್ಷಾಯಣ -2015 ರ ವಿಜೃಂಭಣೆಯ ಆಚರಣೆ

ಶ್ರೀ ಯಕ್ಷದೇವ ಮಿತ್ರ ಕಲಾಮಂಡಳಿ(ರಿ) ಬೆಳುವಾಯಿ,ಮೂಡುಬಿದರೆ ಇವರು ಸಾದರಪಡಿಸಿದ ಹದಿನೆಂಟನೇ ವರುಷದ ಯಕ್ಷಾಯಣ -2015 ಕಾರ್ಯಕ್ರಮವು ತಾ 01-07-2015 ರಿಂದ 05-07-2015 ರ ತನಕ ಮೂಡುಬಿದರೆಯ ಪದ್ಮಾವತೀ ಕಲಾಮಂದಿರದಲ್ಲಿ ಹಾಕಿದ ಕಲಾವಿದ ಮಿಜಾರು ದಿ।ಸುಬ್ರಾಯ ಭಟ್ ವೇದಿಕೆಯಲ್ಲಿ ಅದ್ವಿತೀಯವಾಗಿ ಜರಗಿತು.

ಪ್ರತೀ ದಿನ ಸಂಜೆ ನಾಲ್ಕುವರೆ ಗಂಟೆಗೆ ಆರಂಭವಾಗುತ್ತಿದ್ದ ಕಾರ್ಯಕ್ರಮದಲ್ಲಿ ನಮ್ಮವರಾದ ಶ್ರೀ ಎಮ್ ಆರ್. ವಾಸುದೇವ, ಶ್ರೀ ಪ್ರಫುಲ್ಲಚಂದ್ರ ರಾವ್, ಶ್ರೀ ದಿವಾಕರ ರಾವ್ ಪಡುಬಿದ್ರೆ,ಶ್ರೀ ಮನೋಹರ್ ಪ್ರಸಾದ್, ವೇದಮೂರ್ತಿ ಶ್ರೀ ವಾಗೀಶ ಶಾಸ್ತ್ರಿ ಶ್ರೀ ಗಣೇಶ್ ರಾವ್ ಕುಂಭಾಶಿ ಇವರುಗಳು ಇತರ ಗಣ್ಯರೊಂದಿಗೆ ಅತಿಥಿಗಳಾಗಿ ಭಾಗವಹಿಸಿದ್ದರು.ಯಕ್ಷ ಗಾಯನ-ವಾದನ, ಕಲಾ-ರಸ ವಿರಸ, ತಾಳಮದ್ದಲೆ, ಯಕ್ಷಗಾನ, ತುಳು ತಾಳಮದ್ದಳೆ ಗಳ ವೈವಿಧ್ಯತೆಗಳೊಂದಿಗೆ ಈ ಕಾರ್ಯಕ್ರಮವು ಕಲಾರಸಿಕರಿಗೆ ರಸದೌತಣವನ್ನಿಕ್ಕಿತೆಂದರೆ ಅತಿಶಯೋಕ್ತಿಯಾಗದು. ನಮ್ಮ ಸಮಾಜದವರೆಲ್ಲರಿಗೂ ಚಿರಪರಿಚಿತರಾಗಿರುವ , ಅತ್ಯುತ್ತಮ ಸಂಘಟಕ , ವಾಗ್ಮಿ, ಹಾಗೂ ಅಂತರಾಷ್ಟ್ರೀಯ ಖ್ಯಾತಿಯ ಕಲಾವಿದರಾದ ಶ್ರೀ ಎಮ್. ದೇವಾನಂದ ಭಟ್ ಇವರು ಮಿತ್ರಮಂಡಳಿಯ ಕಾರ್ಯಾಧ್ಯಕ್ಷರಾಗಿ ಈ ಕಾರ್ಯಕ್ರಮದ ರೂವಾರಿಯಾಗಿದ್ದಾರೆ.

## ಶ್ರೀಶಂಕರ ಪ್ರತಿಷ್ಠಾನ

ದಿನಾಂಕ 18-06-2015ನೇ ಗುರುವಾರದಂದು ಸಂಜೆ 5-00 ಗಂಟೆಗೆ ಕೋಟೇಕಾರಿನಲ್ಲಿರುವ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ಅದ್ವೈತ ವೇದಾಂತ ಹಾಗೂ ವಾಲ್ಮೀಕಿ ರಾಮಾಯಣದ ಕುರಿತು ಉಪನ್ಯಾಸ ಮಾಲಿಕೆಯ ಉದ್ಘಾಟನಾ ಸಮಾರಂಭವು ಜರಗಿತು. ಈ ಕಾರ್ಯಕ್ರಮದ ಅಧ್ಯಕ್ಷರಾಗಿ ಶ್ರೀ ಜಯರಾಮ ಶೆಟ್ಟಿ ಆಗಮಿಸಿದ್ದರು. ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ವಿಧಾನಪರಿಷತ್ ಸದಸ್ಯರು ಹಾಗೂ ವಿಧಾನ ಪರಿಷತ್ತಿನ ಮುಖ್ಯ ಸಚೇತಕರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ವೇ।ಮೂ। ಬ್ರಹ್ಮಶ್ರೀ ಹಿರಣ್ಯ ವೆಂಕಟೇಶ್ವರ ಭಟ್ ಹಾಗೂ ಶ್ರೀ ಎಸ್.ಈಶ್ವರ ಭಟ್ ಇವರು ಮುಖ್ಯ ಅತಿಥಿಗಳಾಗಿದ್ದರು. ಶ್ರೀ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರ ಹಾಗೂ ತತ್‌ಕರ ಕಮಲ ಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧು ಶೇಖರ ಭಾರತೀ ಸನ್ನಿಧಾನಂಗಳವರ ಪರಮಾನುಗ್ರಹದಿಂದ ಜರಗಿದ ಈ ಕಾರ್ಯಕ್ರಮದಲ್ಲಿ ಬೊಳ್ವಾರ ಶ್ರೀ ಸತ್ಯಶಂಕರ, ಶ್ರೀಮಠದ ಧರ್ಮಾಧಿಕಾರಿಗಳು; ಶ್ರೀ ಎ.ಶಿವರಾವ್, ಗೌರವಾಧ್ಯಕ್ಷರು; ಶ್ರೀ ಎಮ್.ಆರ್.ವಾಸುದೇವ, ಅಧ್ಯಕ್ಷರು; ಡಾ। ಮಾಧವಿ, ಸಂಚಾಲಕರು; ಶ್ರೀ ಅಶೋಕ್ ಕುಮಾರ್ ಬಾಡಿ, ಸಂಚಾಲಕರು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರು ಹಾಜರಿದ್ದರು. ಇದರೊಂದಿಗೆ ಪ್ರತಿ ಗುರುವಾರ ಸಂಜೆ 5-00ರಿಂದ 7-00 ಗಂಟೆಯ ತನಕ ಉಪನ್ಯಾಸ ಮಾಲಿಕೆಯು ನಡೆಯಲಿದೆ.




ತಂತ್ರಾಡಿ ವಿಶ್ವನಾಥ ಶಾನುಭೋಗ್

94487 24161
97417 85551

ಹರಿಕೃಷ್ಣ ಡಿಜಿಟಲ್ಸ್

ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ

"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಸಮಾಜ ಬಾಂಧವರಿಗೆ ರಿಯಾಯಿತಿಯನಿತ್ತು ಪ್ರೋತ್ಸಾಹಿಸಲಾಗುವುದು

**ಶ್ರೀ ವೈಷ್ಣವಿ ಜ್ಯೋತಿಷ್ಯಾಲಯ**

ನಮ್ಮಲ್ಲಿ ಜಾತಕಗಳನ್ನು ಮಾಡಿ ಕೊಡಲಾಗುವುದು.
ಹಾಗೂ ತತ್ಸಂಬಂಧ ಶಾಂತಿ ಹೋಮಾದಿಗಳನ್ನು ಮತ್ತು ಶುಭ ಕಾರ್ಯಕ್ರಮಗಳನ್ನು ನಮ್ಮಲ್ಲಿಯೇ ವ್ಯವಸ್ಥಿತವಾಗಿ ಮಾಡಿಕೊಡಲಾಗುವುದು.

**ವೇದಮೂರ್ತಿ ಚಿದಾನಂದ ಭಟ್**

#1437, 5ನೇ ಮುಖ್ಯ ರಸ್ತೆ, 2ನೇ "ಡಿ" ಬ್ಲಾಕ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು-560010

ಶ್ರೀ ಅಗಸ್ತ್ಯೇಶ್ವರ ದೇವಸ್ಥಾನದ ಬಳಿ, ಕಿರಿಮಂಜೇಶ್ವರ, ಕುಂದಾಪುರ ತಾಲೂಕು, ಉಡುಪಿ ಜಿಲ್ಲೆ

ಮೊಬೈಲ್- 9886629697, 9986119865

**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.

ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು




**RAJESH POWER PRESS**

**PRINTERS & PUBLISHERS**

DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com

**QUALITY FIRST AND ALWAYS**

# ಜಪಾನ್‌ನ ಅವಿಸ್ಮರಣೀಯ ದಿನಗಳು; ಒಂದು ಅವಲೋಕನ

(ಕಳೆದ ಸಂಚಿಕೆಯಿಂದ.....)

– ಡಾ। ವೈ. ರವೀಂದ್ರನಾಥ ರಾವ್, ಪ್ರಾಂಶುಪಾಲರು, ಬ್ರಹ್ಮಾವರ.



ನನ್ನ ಮಧ್ಯಾಹ್ನದ ಊಟವನ್ನು ಸಮ್ಮೇಳನದ ಸ್ಥಳದ ಸುತ್ತಮುತ್ತಲಿನ ಹೋಟೇಲುಗಳಲ್ಲಿ ಮತ್ತು ರಾತ್ರಿಯ ಊಟವನ್ನು ನನ್ನ ಹೋಟೇಲಿನ ಸುತ್ತ ಮುತ್ತಲಿನ ವಿವಿಧ ಹೋಟೇಲುಗಳಲ್ಲಿ ಪೂರೈಸಿಕೊಳ್ಳುತ್ತಿದ್ದೆ. ಇಲ್ಲಿನ ರೆಸ್ಟೋರೆಂಟ್‌ಗಳಲ್ಲಿ ಹೆಚ್ಚಾಗಿ ಮಹಿಳೆಯರೇ ದುಡಿಯುತ್ತಾರೆ. ಕ್ಯಾಶ್‌ಕೌಂಟರ್‌ನಲ್ಲಿ ಯಾರೂ ಶಾಶ್ವತವಾಗಿ ಇರುವುದಿಲ್ಲ. ಸ್ಟುವರ್ಟ್, ವೈಟರ್, ಕ್ಯಾಶಿಯರ್ ಎಲ್ಲಾ ಕೆಲಸಗಳನ್ನೂ ಎಲ್ಲರೂ ನಿರಂತರವಾಗಿ ಸರದಿಯಂತೆ ಮಾಡುತ್ತಿರುತ್ತಾರೆ. ಆಹಾರದ ಆಯ್ಕೆಗಳನ್ನು ಆರ್ಡರ್‌ಗಳನ್ನು ಇಲೆಕ್ಟ್ರಾನಿಕ್ ಡಿವೈಸ್ ಮೂಲಕವೇ ಅಡುಗೆಯವನಿಗೆ ತಿಳಿಸುತ್ತಾರೆ. ಎಲ್ಲಾ ಗಿರಾಕಿಗಳನ್ನು ಬಹಳ ಗೌರವದಿಂದ ಬರಮಾಡಿಕೊಂಡು ಹಾಗೆಯೇ ಗೌರವದಿಂದ ಕೃತಜ್ಞತೆ ಸಲ್ಲಿಸಿ ಕಳುಹಿಸಿಕೊಡುತ್ತಾರೆ. ಇಲ್ಲಿನ ಕಾರ್ಮಿಕರು ಕಟ್ಟಡ ನಿರ್ಮಾಣ ಮಾಡುವ ಕೆಲಸ, ಪೈಪ್‌ಲೈನ್ ಕೆಲಸ, ಮರಕಡಿಯುವ ಕೆಲಸಗಳನ್ನು ನೋಡುವ ಅವಕಾಶ ನನಗೆ ಸಿಕ್ಕಿತ್ತು. ಅವರೆಲ್ಲರೂ ದೇಹಕ್ಕೆ ರಕ್ಷಣಾ ಕವಚಗಳನ್ನು ಮತ್ತು ತಲೆಯ ರಕ್ಷಣೆಗೆ ಶಿರಸ್ತ್ರಾಣಗಳನ್ನು ಧರಿಸಿಕೊಂಡೇ ತಮ್ಮ ಕೆಲಸಗಳನ್ನು ಮಾಡುತ್ತಿರುವುದನ್ನು ನೋಡಿದೆ. ಹಾಗೂ ಪ್ರಥಮ ಚಿಕಿತ್ಸೆ ಮತ್ತು ಇತರ ರಕ್ಷಣಾ ಸೌಲಭ್ಯಗಳನ್ನು ಪಕ್ಕದಲ್ಲಿ ಇರಿಸಿಕೊಂಡೇ ತಮ್ಮ ಕೆಲಸಗಳನ್ನು ಮಾಡುತ್ತಿರುವುದನ್ನು ನೋಡಿದೆ. ನನ್ನ ಹಣದ ವಿನಿಮಯಕ್ಕಾಗಿ ಟೋಕಿಯೋದಲ್ಲಿನ ವಿಮಾನ ನಿಲ್ದಾಣ ಮತ್ತು ಯಕೊಹಾಮಾದಲ್ಲಿನ ಸಮ್ಮೇಳನದ ಸೇವಾ ಕೇಂದ್ರ, ಹಾಗೆಯೇ ಅಲ್ಲಿನ ಬ್ಯಾಂಕುಗಳಲ್ಲಿ ವ್ಯವಹರಿಸಿದ್ದೆನು. ಬ್ಯಾಂಕ್ ಮತ್ತು ಇತರ ಸೇವಾ ಕೇಂದ್ರಗಳ ಸಿಬ್ಬಂದಿ ವರ್ಗದವರು ನಗುಮುಖದಿಂದ ಸ್ವಾಗತಿಸಿ 'ಒಂದು ನಿಮಿಷ ಕಾಯಬಹುದೇ?' ಎಂದು ಕೇಳಿಕೊಂಡು ಸೇವೆಯನ್ನು ಅತ್ಯಂತ ಶೀಘ್ರವಾಗಿ ನೀಡಿ, ಹಣ ಮತ್ತು ರಶೀದಿಯನ್ನು ಒಂದು ಸುಂದರವಾದ ಟ್ರೇಯಲ್ಲಿ ಹಾಕಿ, ಅದರ ವಿವರಗಳನ್ನು ಹೇಳಿ, ಗೌರವದಿಂದ ಗ್ರಾಹಕರಿಗೆ ನೀಡುವ ಕ್ರಮವನ್ನು ಗಮನಿಸಿದರೆ ನಮ್ಮ ದೇಶದ ವಿವಿಧ ಕಛೇರಿ ಸಿಬ್ಬಂದಿಯರು ನೀಡುವ ಗ್ರಾಹಕ ಸೇವೆಯಲ್ಲಿ ಬಹಳಷ್ಟು ಸುಧಾರಣೆಯಾಗಬೇಕಾಗಿರುವ ಅಗತ್ಯತೆ ಇದೆ ಎಂದು ತಿಳಿಯುತ್ತದೆ.

ನಮ್ಮ ವಿಶ್ವ ಅಧಿವೇಶನ ನಡೆಯುವ ಸ್ಥಳ 'ಇಂಟರ್‌ನ್ಯಾಶನಲ್ ಕಾನ್ಫರೆನ್ಸ್ ಸೆಂಟರ್, ಪೆಸಿಫಿಕೊ ಯಕೊಹಾಮಾ ಎಂಬುವುದಾಗಿದೆ. ಇದು ಇರುವ ಪ್ರದೇಶಕ್ಕೆ 'ಮಿನಟೊ ಮಿರೈ' ಎಂದು ಹೆಸರು. ಇದು ಯಕೊಹಾಮ ನಗರದ ಮಧ್ಯ ಭಾಗದಲ್ಲಿದೆ. ನನ್ನ ಹೋಟೇಲಿನಿಂದ ಅಲ್ಲಿಗೆ ನಡಿಗೆಯಲ್ಲಿ ಸುಮಾರು 15 ನಿಮಿಷಗಳು ಬೇಕಾಗುತ್ತವೆ. ಸಿಟಿಟ್ರೈನ್‌ಗಳು ಇಲ್ಲಿ ನೆಲ ಅಂತಸ್ತಿನಲ್ಲಿ ಓಡಾಡುತ್ತಿರುತ್ತವೆ. ಅದಕ್ಕಾಗಿ ನಾವು ಉಪದಾರಿ (Subway) ಮೂಲಕ ಹೋಗಬೇಕು. ಆದರೆ ರೈಲ್ವೆ ನಿಲ್ದಾಣಗಳಲ್ಲಿ ಹೆಚ್ಚಿನ ಎಲ್ಲಾ ಸೂಚನೆಗಳು, ಟಿಕೆಟ್ ಇತ್ಯಾದಿ ಎಲ್ಲವೂ ಜಪಾನಿ ಭಾಷೆಯಲ್ಲೇ ಇರುವುದರಿಂದ ವಿದೇಶಿಯರಿಗೆ ವ್ಯವಹರಿಸಲು ಕಷ್ಟವಾಗುತ್ತದೆ. ನಮ್ಮ ಸಮ್ಮೇಳನದ ಸ್ಥಳದಲ್ಲಿ ವಿವಿಧ ಮಹಡಿಗಳಲ್ಲಿ ಒದಗಿಸಿರುವ ಸೌಲಭ್ಯಗಳು ಅಕ್ಕಪಕ್ಕದಲ್ಲಿನ ವಿವಿಧ ಸಭಾಂಗಣಗಳು ಇತ್ಯಾದಿ, ನಾನು ಈ ಹಿಂದೆ ದಕ್ಷಿಣ ಆಫ್ರಿಕಾ ಮತ್ತು ಸ್ವೀಡನ್ ದೇಶಗಳಲ್ಲಿ ಭಾಗವಹಿಸಿದ ಸಭಾಂಗಣ, ಸೌಲಭ್ಯಗಳಿಗಿಂತಲೂ ಉತ್ತಮ ಮಟ್ಟದ್ದಾಗಿದ್ದು ಗಾತ್ರದಲ್ಲೂ ದೊಡ್ಡದಾಗಿತ್ತು. ಸಂಜೆ ನಡೆದ ಸಮ್ಮೇಳನದ ಉದ್ಘಾಟನೆಯ ನಂತರ ಜಪಾನಿ ಕಲೆ, ಸಂಸ್ಕೃತಿಗಳನ್ನು ಬಿಂಬಿಸುವ ಅಂತಾರಾಷ್ಟ್ರೀಯ ಮಟ್ಟದ ಜಪಾನಿ ಕಲಾವಿದರುಗಳಿಂದ ಕೊಳಲು ವಾದನ, ನಗಾರಿ ನುಡಿಸುವ ಪ್ರದರ್ಶನಗಳು, ನೃತ್ಯಗಳನ್ನು ಪ್ರದರ್ಶಿಸಿದ್ದರು. ಅನಂತರ ಜಪಾನಿ ಸಾಂಪ್ರದಾಯಿಕ ಪಾನೀಯಗಳೊಂದಿಗೆ ಸ್ವಾಗತ, ಅತಿಥಿಸತ್ಕಾರ ವ್ಯವಸ್ಥೆಯನ್ನೂ ಬಹಳ ಆಕರ್ಷಣೀಯವಾಗಿ ಮತ್ತು ಅಚ್ಚುಕಟ್ಟಾಗಿ ನೆರವೇರಿಸಿದ್ದರು.

ನಾನು ಆವಾಗಲೇ ನನ್ನ ಹೋಟೇಲಿಗೆ ಹೋಗುವ ದಾರಿಯ ಪರಿಚಯ ಮಾಡಿಕೊಂಡಿರುವುದರಿಂದ ರಾತ್ರಿಯ ಸತ್ಕಾರ ಸಮಾರಂಭದ ಬಳಿಕ ನಡಿಗೆಯಲ್ಲೇ ಹಿಂತಿರುಗಿ ಹೋಗಲು ನಿರ್ಧರಿಸಿದೆ. ನಾನು ಹೊರಟ ಸ್ವಲ್ಪ ಸಮಯದಲ್ಲಿ ಸಮ್ಮೇಳನಕ್ಕೆ ಪ್ರತಿನಿಧಿಯಾಗಿ ಬಂದಿರುವ ಬ್ರಿಟಿಷ್ ಮಹಿಳೆಯೊಬ್ಬರು ನನ್ನನ್ನು ಭೇಟಿಯಾಗಿ "ನನಗೆ ಇಂತಹ ಹೋಟೇಲಿಗೆ ಹೋಗಬೇಕು. ನಾನು ನಿಮ್ಮ ಜೊತೆ ಬರಬಹುದೇ?" ಎಂದು ಕೇಳಿಕೊಂಡರು. ಅವರು ಹೇಳಿದ ಹೋಟೇಲ್ ನಾನು ಈ ಹಿಂದೆ ಕೇಳಿದ್ದರೂ, ನಾನಾಗ "ನನಗೆ ರೂಟ್‌ಇನ್ ಹೋಟೇಲಿಗೆ ಹೋಗಬೇಕು. ಅಲ್ಲಿಯವರೆಗೆ ನೀವು ನನ್ನೊಂದಿಗೆ ಬರಬಹುದು. ಅನಂತರ ನಿಮ್ಮ ಹೋಟೇಲಿಗೆ ಸ್ವತಂತ್ರವಾಗಿ ನೀವು ಹೋಗಬಲ್ಲಿರಾ?" ಎಂದು ಕೇಳಿದೆ. ಅದಕ್ಕವರು "ನನ್ನ ಹೋಟೇಲ್ ನಿಮ್ಮ ಹೋಟೇಲ್‌ನ ಸ್ವಲ್ಪ ದೂರದಲ್ಲಿದೆ. ನಾನು ಅಲ್ಲಿಂದ ಹೋಗಬಲ್ಲೆನೆಂದು" ಹೇಳಿದರು. ಮಧ್ಯೆ ದಾರಿಯುದ್ದಕ್ಕೂ ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯ ಒಳಿತು ಕೆಡುಕುಗಳ ಕುರಿತು ಮತ್ತು ಇತರ ಅನೇಕ ವಿಚಾರಗಳನ್ನು ನಾವು ಹಂಚಿಕೊಂಡೆವು. ನಾನು ಬ್ರಿಟಿಷ್ ಆಳ್ವಿಕೆಯ ಕೆಲವು ಅವಗುಣಗಳನ್ನು ಗುರುತಿಸಿ ಹಂಚಿಕೊಂಡ ಬಗ್ಗೆ ಆಕೆ ತನ್ನ ಅಸಂತೋಷವನ್ನು ತೋರ್ಪಡಿಸಿದ್ದರೂ ಕೊನೆಯಲ್ಲಿ ನನ್ನ ಮಾತುಗಳಿಗೆ ಒಪ್ಪಿಗೆ ಸೂಚಿಸಿ, ಕೃತಜ್ಞತೆ ಸಲ್ಲಿಸಿದರು.

(ಮುಂದುವರಿಯುವುದು)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಕುಂಜಿಬೆಟ್ಟು, ಉಡುಪಿ : ಮಹಾಸಭೆಯ ವರದಿ

ತಾ.21-06-2015ರ ರವಿವಾರ ಶ್ರೀಶಾರದ ಮಂಟಪ, ಕುಂಜಿಬೆಟ್ಟು ಇಲ್ಲಿ ನಮ್ಮ ಸಂಘದ 2014-2015ನೇ ಸಾಲಿನ ವಾರ್ಷಿಕ ಮಹಾಸಭೆಯು ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾಯರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಸಲಹೆಗಾರರಾದ ಶ್ರೀ ಫಾಲಚಂದ್ರರಾಯರು, ಶ್ರೀ ರಮೇಶ ರಾವ್ ಶ್ಯಾನುಭಾಗ್ ಸತಾರ, ಕಾರ್ಯದರ್ಶಿ ಶ್ರೀ ಅರವಿಂದ ಕುಮಾರ್ ಹಾಗೂ ಕೋಶಾಧಿಕಾರಿ ಶ್ರೀ ಬಿ.ಕೃಷ್ಣಮೂರ್ತಿ ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಮ್ಮ ಸಮಾಜದ ಅನೇಕ ಗಣ್ಯರೂ ಸಭೆಯಲ್ಲಿ ಹಾಜರಿದ್ದರು. ಸಂಜೆ ನಾಲ್ಕು ಗಂಟೆಗೆ ಶ್ರೀಮತಿ ಉಷಾ ಮೋಹನ್‌ದೇವ್ ಹಾಗೂ ಶ್ರೀಮತಿ ಜಯಲಕ್ಷ್ಮೀ ಮುರಳೀಧರ ರಾವ್‌ರವರ ಪ್ರಾರ್ಥನೆಯೊಂದಿಗೆ ಸಭೆಯು ಆರಂಭಗೊಂಡಿತು. ಸಭಾಸದರನ್ನು ಅಧ್ಯಕ್ಷರು ಸ್ವಾಗತಿಸಿದ ನಂತರ ಈ ವರ್ಷ ನಿಧನರಾದ ಶ್ರೀ ವೈ. ಸರ್ವಜ್ಞಮೂರ್ತಿಯವರು (ಸಂಘದಲ್ಲಿ ಉಪಾಧ್ಯಕ್ಷರಾಗಿ ಹಾಗೂ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದವರು), ಕೊಡವೂರು ಚಂದ್ರಶೇಖರ ರಾಯರು, ನೀಲಾವರ ಲಕ್ಷ್ಮೀನಾರ್ಣಪ್ಪಯ್ಯರಾದಿಯಾಗಿ ಅಗಲಿದ ನಮ್ಮ ಸಮಾಜದ ಎಲ್ಲಾ ಬಂಧುಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು. ಅನಂತರ ಮಹಾಸಭೆಯ ನೋಟೀಸನ್ನು ಸಭೆಯು ಅಂಗೀಕರಿಸಿತು. ಕಾರ್ಯದರ್ಶಿಗಳು ಮಂಡಿಸಿದ ಹಿಂದಿನ ಮಹಾಸಭೆಯ ವರದಿ, 2014-2015ನೇ ವರ್ಷದಲ್ಲಿ ಸಂಘವು ನಡೆಸಿದ ಕಾರ್ಯಕ್ರಮಗಳ ವರದಿಯನ್ನು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು. ನಂತರ ಕೋಶಾಧಿಕಾರಿಗಳು ಮಂಡಿಸಿದ 2014-2015ನೇ ಸಾಲಿನ ಲೆಕ್ಕಪತ್ರ ಹಾಗೂ 2015-2016ನೇ ಸಾಲಿನ ಮುಂಗಡ ಪತ್ರವನ್ನೂ ಸಭೆಯು ಅಂಗೀಕರಿಸಿತು. ನಂತರ ಶ್ರೀ ಫಾಲಚಂದ್ರರಾಯರು ಹಾಗೂ ಶ್ರೀ ರಮೇಶರಾವ್ ಶ್ಯಾನುಭಾಗರ ಉಸ್ತುವಾರಿಯಲ್ಲಿ ಮುಂದಿನ ಮೂರು ವರ್ಷದ ಅವಧಿಗೆ ನೂತನ ಆಡಳಿತ ಮಂಡಳಿಯ ಆಯ್ಕೆ ನಡೆಯಿತು. ಆರು ಜನ ಮಹಿಳೆಯರೂ ಸೇರಿದಂತೆ ಒಟ್ಟು ಇಪ್ಪತ್ತೇಳು ಜನ ನಿರ್ದೇಶಕರುಗಳ ಆಯ್ಕೆಯನ್ನು ಶ್ರೀ ಫಾಲಚಂದ್ರರಾಯರು ಘೋಷಿಸುತ್ತಾ ಕಾರ್ಯಕಾರೀ ಸಮಿತಿಯಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ನೀಡಲು ಕರೆ ನೀಡಿದರು. ಮಹಿಳೆಯರು ಸಂಘದ ಆಡಳಿತದಲ್ಲಿ ಸಕ್ರಿಯರಾಗಿ ಪಾಲ್ಗೊಂಡು ಅನುಭವ ಪಡೆದು ಮುಂದೆ ಮಹಿಳೆಯೊಬ್ಬಳು ಈ ಸಂಘದ ಅಧ್ಯಕ್ಷೆಯಾಗುವ ದಿನ ಬರಲಿ ಎಂದು ಆಶಿಸಿದರು. ಹಿರಿಯರು ಕಟ್ಟಿಕೊಟ್ಟ ಈ ಸಂಘ ಹಾಗೂ ಈ ಕಟ್ಟಡವನ್ನು ಅವರ ಆಶಯಕ್ಕೆ ಪೂರಕವಾಗಿ ನಡೆಸಿಕೊಂಡು ಹಾಗೂ ಬೆಳೆಸಿಕೊಂಡು ಬನ್ನಿರಿ, ಅದಕ್ಕೆ ನಮ್ಮ ಸಹಕಾರವಿದೆ ಎಂದು ಶ್ರೀ ರಮೇಶರಾವ್ ಸತಾರ ಇವರು ನುಡಿದರು. ಅರವಿಂದ ರಾಯರ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.



**ಶ್ರೀ ಮಾತಾ ಜ್ಯೋತಿಷ್ಯಾಲಯ**

ಶ್ರೀ ಸುಬ್ರಹ್ಮಣ್ಯ ಕ್ಷೇತ್ರ, ಚೌಳಿಕೆರೆ, ಬಾರ್ಕೂರು.

ಬಾರ್ಕೂರು ಸಂಸ್ಥಾನದ ಪಾರಂಪರ್ಯ ನಾಗಬ್ರಹ್ಮ ಹಾಗೂ ದುರ್ಗೆಯ ದರ್ಶನ ಪಾತ್ರಿಗಳು, ಜೋತಿಷ್ಯರು ಮತ್ತು ಪುರೋಹಿತರು ಅಷ್ಟ ಮಂಗಲ ಪ್ರಶ್ನೆ, ಆರೂಢರಾಶಿ ಪ್ರಶ್ನೆ, ಜಾತಕ, ನಾಗದರ್ಶನ ಮತ್ತು ಸರ್ಪಸಂಸ್ಕಾರ, ಆಶ್ಲೇಷಬಲಿ, ಪ್ರತಿಷ್ಠೆ, ಶಾಂತಿ ಹಾಗೂ ಶುಭ ಕರ್ಮಗಳಿಗೆ ಅಗತ್ಯವಿದ್ದಲ್ಲಿ ವಿಚಾರಿಸಿ.

**ಶ್ರೀ ರಾಘವೇಂದ್ರ ಭಟ್ (ಫೋನ್ : 9632302234.)**

ಪ್ರೊ : ಸುಧಾಕರ್ ರಾವ್ ಬೆಳ್ಳೆ



**ಶ್ರೀಮಾತಾ ಇಲೆಕ್ಟ್ರಾನಿಕ್ಸ್**

ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....

ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103

ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093



ಎಮ್. ದೇವಾನಂದ್ ಭಟ್ Cell : 9845644556 9483913344



**ಶೋಭಾ ಡಿಜಿಟಲ್**

ಸ್ಟುಡಿಯೋ & ವೀಡಿಯೊ

ಬೆಳ್ವಾಯಿ-574213 (08258)-276177 (O)

ಮೂಡಬಿದ್ರಿ, ಲಾವಂತ ಕಾಂಪ್ಲೆಕ್ಸ್ 9901995655

ಎಡಪದವು - 574 164 (0824)-2256374 (O) ಮಂಗಳೂರು, ದ.ಕ.

ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

## ಮಾಂಗಲ್ಯಂ ತಂತುನಾನೇನ ....

ಶ್ರೀಮತಿ ಸಾವಿತ್ರಿ ಮತ್ತು ಕೊಕ್ರಾಡಿ ಶ್ರೀ ವಸಂತ ರಾವ್‌ರವರ ಪುತ್ರ **ಸಂತೋಷ್** ಹಾಗೂ ಶ್ರೀಮತಿ ಸುಮಿತ್ರ ಮತ್ತು ಶ್ರೀ ಬಿ.ಎನ್.ಅಣ್ಣಪ್ಪಯ್ಯರವರ ಪುತ್ರಿ **ನೂತನ** ಇವರ ವಿವಾಹವು ತಾ.07-06-2015ರಂದು ನಂದಾವರ ಶ್ರೀ ವಿನಾಯಕ ಶಂಕರನಾರಾಯಣ ದುರ್ಗಾಂಬಾ ಕ್ಷೇತ್ರದ ನಂದಾದೀಪ ಕಲ್ಯಾಣ ಮಂಟಪದಲ್ಲಿ ನೆರವೇರಿತು.

★★★ ★★★

ಶ್ರೀಮತಿ ಇಂದಿರಾ ಮತ್ತು ಶ್ರೀ ಎರ್ಮಾಳು ರಾಮಚಂದ್ರ ರಾವ್ ಇವರ ಪುತ್ರ **ನರೇಶ** ಹಾಗೂ ಶ್ರೀಮತಿ ಧನಲಕ್ಷ್ಮೀ ಮತ್ತು ಶ್ರೀ ರಾಮಕೃಷ್ಣ ಭಟ್ ಇವರ ಪುತ್ರಿ **ಹರ್ಷಿತಾ** ಇವರ ವಿವಾಹವು ತಾ.11-06-2015ರಂದು ಪಾವಂಜೆ ಶ್ರೀ ಜ್ಞಾನಶಕ್ತಿ ಸುಬ್ರಹ್ಮಣ್ಯ ದೇವಸ್ಥಾನದ ಶಾರದ್ವತ ಯಜ್ಞಾಂಗಣದಲ್ಲಿ ನೆರವೇರಿತು.

## ಉದ್ಘಾಟನೆ

ಶ್ರೀ ಸುಬ್ರಹ್ಮಣ್ಯ ಸಹಕಾರ ಸಂಘ (ನಿ.), ಶ್ರೀ ಸುಬ್ರಹ್ಮಣ್ಯ ಸಭಾ, ಬಿಜೈ ರಸ್ತೆ, ಮಂಗಳೂರು-3 ಇದರ ಕಾರ್ಕಳ ಶಾಖೆಯ ಉದ್ಘಾಟನಾ ಸಮಾರಂಭವು ತಾ.18-06-2015ನೇ ಗುರುವಾರ ಬೆಳಿಗ್ಗೆ 9-30ಕ್ಕೆ ಅನಂತಶಯನ, ತೆಳ್ಳಾರು ರಸ್ತೆ, ಕಾರ್ಕಳದ ಶ್ರೀ ಶಂಕರ ಕಟ್ಟಡದ ಮೊದಲನೇ ಮಹಡಿಯಲ್ಲಿ ನೆರವೇರಿತು. ಅಧ್ಯಕ್ಷತೆಯನ್ನು ಶ್ರೀ ಕರುಣ್‌ರಾವ್ ಬೆಳ್ಳೆ ವಹಿಸಿದ್ದರು. ಕಟ್ಟಡದ ಉದ್ಘಾಟನೆಯನ್ನು ಶ್ರೀ ಸುನೀಲ್ ಕುಮಾರ್, ಶಾಸಕರು, ಕಾರ್ಕಳ ಇವರು ನೆರವೇರಿಸಿದರು. ಭದ್ರತಾ ಕೋಶದ ಉದ್ಘಾಟನೆಯನ್ನು ಶ್ರೀ ರಾಜಗೋಪಾಲ ಆಚಾರ್, ಹಿರಿಯ ವಕೀಲರೂ, ಪ್ರಥಮ ಠೇವಣಿ ಪತ್ರದ ಹಸ್ತಾಂತರನ್ನು ಶ್ರೀಮತಿ ರೆಹಮದ್ ಎನ್.ಶೇಖ್, ಪುರಸಭಾ ಅಧ್ಯಕ್ಷರು, ಕಾರ್ಕಳ ಇವರೂ ನೆರವೇರಿಸಿದರು. ಶ್ರೀ ಮುನಿಯಾಲು ರಾಮಮೋಹನ ರಾವ್ ಇವರು ದೀಪ ಬೆಳಗಿಸಿ ಶುಭ ಹಾರೈಸಿದರು. ಶ್ರೀ ಕೆ. ರತ್ನಾಕರ ರಾವ್, ಅಧ್ಯಕ್ಷರು, ಕಾರ್ಕಳ ಶಾಖಾ ಸಲಹಾ ಸಮಿತಿ, ಶ್ರೀ ಕೆ. ಸತೀಶ್ ರಾವ್, ಉಪಾಧ್ಯಕ್ಷರು, ಪಿ. ಉದಯಕುಮಾರ್ ರಾವ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಇನ್ನಿತರ ಗಣ್ಯರು ಹಾಜರಿದ್ದರು.

## ಗೃಹಪ್ರವೇಶ ಸಮಾರಂಭ

ತಾರೀಕು. 20-06-2015 ರಂದು ಕಾರ್ಕಳ ಜೋಗುಳಬೆಟ್ಟು 'ಶ್ರೀರಾಮಧಾಮ ಧ್ಯಾನ ಮಂದಿರ'ದ ಪಕ್ಕದಲ್ಲಿ ಆಳುಗ್ಗೇಲು ದಿ। ಪ್ರಭಾಕರ ಹೆಬ್ಬಾರರ ಪತ್ನಿ ಶ್ರೀಮತಿ ಜಯಂತಿಯವರು ತನ್ನ ಹೊಸಮನೆ "ಶ್ರೀರಾಮ ಕೃಪಾ"ದ ಗೃಹಪ್ರವೇಶ ಸಮಾರಂಭವನ್ನು ಬಂಧು-ಭಾಂಧವರೊಂದಿಗೆ ಸರಳವಾಗಿ ಆಚರಿಸಿದರು. ಕಾರ್ಯಕ್ರಮ ನಡೆಸಿಕೊಟ್ಟು ಅವರ ಅಣ್ಣಂದಿರಾದ ಕೊಲ್ವೆ ಗೋಪಾಲಕೃಷ್ಣರಾವ್, ಶ್ರೀರಾಮ ಮಂದಿರದ ಶಶಿಧರರಾವ್ ಮತ್ತು ಚಂದ್ರಶೇಖರರವರ ಆಶೀರ್ವಾದ ಪಡೆದು ಪರೋಕ್ಷವಾಗಿ ಸಹಕರಿಸಿದವರನ್ನು ನೆನಪಿಸಿಕೊಂಡರು. ಶ್ರೀಮತಿ ಜಯಂತಿಯವರ ಪುತ್ರಿ ಸೌ।ರೇಖಾ ಮತ್ತು ಅಳಿಯ ಸಾಯಿ ಗಿರಿಧರ (ಕಲವುಡ್ಕ ಪರಮೇಶ್ವರಯ್ಯನವರ ಪುತ್ರ) ಉದ್ಯೋಗ ನಿಮಿತ್ತ 'ನ್ಯೂಝಿಲೆಂಡ್'ನಲ್ಲಿ ವಾಸವಾಗಿದ್ದಾರೆ.

ವರದಿ: ಜಿ.ಕೆ.ಕೊಲ್ವೆ, ಉಡುಪಿ.

## ಹಿರಿಯ ನಾಗರಿಕರ ವೇದಿಕೆಯಿಂದ ವಿಶ್ವ ಯೋಗ ದಿನ

ಉಡುಪಿಯ ಹಿರಿಯ ನಾಗರಿಕರ ವೇದಿಕೆಯಿಂದ ಜೂನ್ 21ರಂದು ವಿಶ್ವಯೋಗದಿನವನ್ನು ಆಜ್ಜರಕಾಡಿನಲ್ಲಿರುವ ಕ್ರೀಡಾಂಗಣದಲ್ಲಿ ಆಚರಿಸಲಾಯಿತು. ಯೋಗಗುರುಗಳಾಗಿ ಶ್ರೀ ಎಂ ಸದಾನಂದರಾಯರು ಆಗಮಿಸಿದ್ದರು. ಉಡುಪಿ ನಗರ ಸಭಾಧ್ಯಕ್ಷ ಶ್ರೀ ಯುವರಾಜ್ ಅತಿಥಿಯಾಗಿ ಭಾಗವಹಿಸಿದ್ದರು. ವೇದಿಕೆಯ ಉಪಾಧ್ಯಕ್ಷರಾದ ಶ್ರೀ ಸಿ.ಎಸ್. ರಾವ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ವೈ. ಭುವನೇಂದ್ರ ರಾವ್ ಇವರು ಕಾರ್ಯಕ್ರಮವನ್ನು ನಿರೂಪಿಸಿದ್ದರು.

## ಪ್ರಕಟಣೆ

ತಾ.19-08-2015ನೇ ಬುಧವಾರ ನಾಗರಪಂಚಮಿ ಪ್ರಯುಕ್ತ ಶ್ರೀ ಶಾರದಾ ಮಂಟಪದಲ್ಲಿರುವ ನಾಗದೇವರಿಗೆ ಪೂಜೆ ಹಾಗೂ ಪಂಚಾಮೃತ ಅಭಿಷೇಕವು ಪೂರ್ವಾಹ್ನ 10-00 ಗಂಟೆಗೆ ಜರುಗಲಿದೆ. ಭಕ್ತಾಭಿಮಾನಿಗಳಿಗೆ ಆದರದ ಸ್ವಾಗತ.

★★★★

ತಾ.28-08-2015ನೇ ಶುಕ್ರವಾರದಂದು ಬೆಳಿಗ್ಗೆ 10-00 ಗಂಟೆಗೆ ಸೌರ ಋಗುಪಾಕರ್ಮವು ಶ್ರೀಶಾರದಾ ಮಂಟಪದಲ್ಲಿ ಜರುಗಲಿದೆ. ಹಾಗೆಯೇ ಅದೇ ದಿನ ಸಂಜೆ 4-00 ಗಂಟೆಗೆ ವರಮಹಾಲಕ್ಷ್ಮೀ ವ್ರತವು ಜರಗಲಿದೆ. ಎಲ್ಲರಿಗೂ ಆದರದ ಸ್ವಾಗತ.

### ಕರ್ಕಾಟಕ ಮಾಸದ ವಿಶೇಷ ದಿನಗಳು

| | |
|---|---|
| 16-07-2015 | ಕರ್ಕಾಟಕ ಸಂಕ್ರಮಣ |
| 16-07-2015 | ಅಮವಾಸ್ಯಾ |
| 20-07-2015 | ಪುಷ್ಯ ನಕ್ಷತ್ರಾರಂಭ |
| 27-07-2015 | ಸರ್ವೈಕಾದಶೀ |
| 31-07-2015 | ಗುರು ಪೂರ್ಣಿಮಾ |
| 03-08-2015 | ಸಂಕಷ್ಟಹರ ಚತುರ್ಥಿ |
| 03-08-2015 | ಆಶ್ಲೇಷ ನಕ್ಷತ್ರಾರಂಭ |
| 10-08-2015 | ಸರ್ವೈಕಾದಶೀ |
| 17-08-2015 | ಸಿಂಹ ಸಂಕ್ರಮಣ |

## ಬ್ರಹ್ಮೋಪದೇಶ

**ಚಿ। ಸ್ಕಂದ**

ಶ್ರೀಮತಿ ರಶ್ಮಿ ಮತ್ತು ತಂತ್ರಾಡಿ ವಿಶ್ವನಾಥ ಶ್ಯಾನುಭೋಗ್ ದಂಪತಿಗಳ ಪುತ್ರ ಸ್ಕಂದನ ಬಹ್ಮೋಪದೇಶವು ತಾ.07-06-2015ರಂದು ಉಡುಪಿ ಕುಂಜಿಬೆಟ್ಟು ಶ್ರೀಶಾರದಾ ಮಂಟಪದಲ್ಲಿ ನೇರವೇರಿತು.


**ದೇವಿಕೃಪಾ ಏಜೆನ್ಸೀಸ್, ನಂದಿಕೂರು**

ಫೋನ್ : 2556536 (R), 2555466 (O), Mobile : 9845149521



**ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.**

**ಪ್ರೊ। ಎಸ್. ಜನಾರ್ದನ್ ರಾವ್**
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು


## ಪುಣ್ಯಸ್ಮರಣೆ



ಜನನ : 08-08-1938 ಮರಣ : 17-07-2008

**ಡಾ। ಎಲ್ಲೂರು ಚಂದ್ರಶೇಖರ ರಾವ್**

**ಸರಿದುವು ಏಳು ವರುಷಗಳು ನಿಮ್ಮ ಬದುಕಿನಾ ನೆನಪಿನಲಿ**
**ಅರ್ಪಿಸುವೆವು ನುಡಿನಮನಗಳ ಶ್ರದ್ಧಾಭಕ್ತಿಯಲಿ**

ಶ್ರೀಮತಿ ಇಂದಿರಾ (ಪತ್ನಿ)
ಡಾ। ವೈ. ಸುದರ್ಶನ ರಾವ್ ಮತ್ತು ಶ್ರೀಮತಿ ವಿದ್ಯಾ ರಾವ್
ಶ್ರೀ ವೈ. ಚಿತ್ತರಂಜನ ರಾವ್ ಮತ್ತು ಶ್ರೀಮತಿ ಭಾನುಪ್ರಿಯ
ಶ್ರೀಮತಿ ನಿವೇದಿತಾ ರಾವ್ ಮತ್ತು ಶ್ರೀ ಕೆ. ಎಸ್. ಮುರಲೀಧರ ರಾವ್
ಮತ್ತು ಮೊಮ್ಮಕ್ಕಳು

## ನಿಧನ



### ಶ್ರೀಮತಿ ಕಮುದ್ವತಿ

ಕುಂದಾಪುರ ತಾಲೂಕಿನ ಕುಂಭಾಶಿ ಗ್ರಾಮದ ಗಣೇಶ ನಗರದಲ್ಲಿ ವಾಸ್ತವ್ಯದಲ್ಲಿದ್ದ ಶ್ರೀಮತಿ ಕಮುದ್ವತಿಯವರು (ಶ್ರೀ.ಐ.ಪಿ. ರವೀಂದ್ರ ರಾಯರ ಧರ್ಮಪತ್ನಿ) ದಿನಾಂಕ 10-06-2015 ರಂದು ತಮ್ಮ 63ನೇ ವಯಸ್ಸಿನಲ್ಲಿ, ಸ್ವಗೃಹದಲ್ಲಿ ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಮೃತರು ಪತಿ, ಓರ್ವಪುತ್ರಿ, ಓರ್ವಪುತ್ರ ಹಾಗೂ ಅಪಾರ ಬಂಧುಬಾಂಧವರನ್ನು ಅಗಲಿದ್ದಾರೆ.

### ಕೃಷ್ಣರಾಜ ರಾವ್

ಮಂದಾರ್ತಿ ಸಮೀಪದ ತಂತ್ರಾಡಿ ನಿವಾಸಿ ಕೃಷ್ಣರಾಜ ರಾವ್ (58) ಜೂ. 25ರಂದು ಬೆಂಗಳೂರಿನಲ್ಲಿ ನಿಧನ ಹೊಂದಿದರು. ಮೃತರು ತಂದೆ, ಪತ್ನಿ ಇಬ್ಬರು ಪುತ್ರರನ್ನು ಅಗಲಿದ್ದಾರೆ. ಅವರು ಗುಜರಾತ್‌ನ ಸಿಲ್ವಾಸದಲ್ಲಿ ಆಮಂತ್ರಣ ಗ್ರೂಪ್ ಆಫ್ ಹೋಟೇಲ್ ಸಹಿತ ಇತರ ಉದ್ಯಮಗಳನ್ನು ಹೊಂದಿದ್ದರು. ಕರ್ನಾಟಕ ಕಮ್ಯುನಿಟಿ ಆಫ್ ಸಿಲ್ವಾಸ್‌ನ ಸಕ್ರಿಯ ಸದಸ್ಯರಾಗಿದ್ದರು.

### ವೈ. ಸದಾನಂದ ರಾವ್

ದಿ। ಎರ್ಮಾಳು ರಾಮರಾಯರ ಪುತ್ರ ವೈ.ಸದಾನಂದ ರಾವ್ ಹೃದಯಾಘಾತದಿಂದ ಜೂನ್ 30ರಂದು ಎರ್ಮಾಳಿನ ಸ್ವಗೃಹದಲ್ಲಿ ನಿಧನ ಹೊಂದಿದರು. ಅವಿವಾಹಿತರಾಗಿದ್ದ ಅವರು ತಾಯಿ, ಇಬ್ಬರು ಸಹೋದರರು, ಮೂವರು ಸಹೋದರಿಯರನ್ನು ಅಗಲಿದ್ದಾರೆ. ನಿಧನ ಸಮಯದಲ್ಲಿ ಅವರಿಗೆ 50 ವರ್ಷ ಪ್ರಾಯವಾಗಿತ್ತು.

## ವಿಳಾಸ ಬದಲಾವಣೆ

**K. RAJAGOPAL**
(Corps of Signals Indian Army)
12-65D, iVaralaxmiî Near Vasuki
Subramanya Temple, Kuthpady ñ 574118.
Udyavara, Udupi. Mobile : 9449548584.


**ANANTHAKRISHNA RAO**
1554, 20th D Cross,
9th Main, B Block,
Sahakaranagar, Bangalore-560092.


*Krishna Rao*

Ph : 2520652
Mob. : 9902029048

**KISHAN**






**Studio & Video**

**Indoor Photography & Port Folio Photography, Video & Mixing, Lamination**

MAIN ROAD, MAJOOR & BANTAKAL.

# ವೈದ್ಯಕೀಯ ವೇದಿಕೆ-ಆರೋಗ್ಯ ಮಾಹಿತಿ

ಡಾ। ವೈ. ಸುದರ್ಶನ ರಾವ್



**ಸ್ವಚ್ಚತೆ ಹಾಗೂ ಆರೋಗ್ಯ** (...ಮುಂದುವರೆದುದು )

ಹಿಂದಿನ ಸಂಚಿಕೆಯಲ್ಲಿ ಪ್ರಕೃತಿಯು ತನ್ನಲ್ಲಿ ಅಳವಡಿಸಿಕೊಂಡಿರುವ ಸ್ವಚ್ಚತೆಯನ್ನು ಕಾಪಾಡಿಕೊಳ್ಳುವ ವಿಧಾನಗಳನ್ನು ಪರಿಶೀಲಿಸಿದೆವು . ಈಗ ನಾಡಿನಲ್ಲಿ ಸ್ವಚ್ಚತೆಯ ಪಾಡು ಹೇಗಿದೆ ಎಂದು ನೋಡೋಣ

**ನಾಡಿನಲ್ಲಿ ತಯಾರಾಗುವ ತ್ಯಾಜ್ಯಗಳು ಯಾವುವು?**

ಮೊತ್ತಮೊದಲು ಈ ಲೇಖನದ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಕಾಡಿಗೂ ನಾಡಿಗೂ ಇರುವ ವ್ಯತ್ಯಾಸವನ್ನು ಪಟ್ಟಿ ಮಾಡೋಣ

ಮೊದಲನೆಯದಾಗಿ ಕಾಡಿನಲ್ಲಿ ಸಸ್ಯ ಸಂಕುಲದ ಸಂಖ್ಯೆ ಹೆಚ್ಚು ಇದೆ ಹಾಗೂ ಪ್ರಾಣಿಗಳ ಸಂಖ್ಯೆ ಪ್ರತೀ ಚದರ ಮೀಟರ್‌ಗೆ, ನಾಡಿಗೆ ಹೋಲಿಸಿದಾಗ, ಕಡಿಮೆ ಇದೆ. ಕಾಡಿನಲ್ಲಿ ಪ್ರಾಣಿಗಳಲ್ಲೂ ಬೇರೆಬೇರೆ ಜಾತಿಯ ಪ್ರಾಣಿಗಳಿದ್ದು ವೈವಿಧ್ಯತೆ ಇದೆ, ಈ ವೈವಿಧ್ಯತೆಯ ಮೇಲೆ ಆಯಾ ಪ್ರಾಣಿಯ ಆಹಾರ, ವಸತಿ ಹಾಗೂ ಶತ್ರುಗಳ ಆಧಾರದ ಮೇಲೆ ಒಂದು ನೈಸರ್ಗಿಕವಾದ ಹಿಡಿತವಿದೆ. ನಾಡಿನಲ್ಲಾದರೊ ಮನುಷ್ಯನೇ ಮುಖ್ಯ ಪ್ರಾಣಿ. ಸಂಖ್ಯೆಯೂ ವಿಪರೀತ. ನಾಡಿನಲ್ಲಿರುವ ಇತರ ಪ್ರಾಣಿಗಳೂ ಮನುಷ್ಯನೇ ತನ್ನ ಉಪಯೋಗಕ್ಕಾಗಿ ಬೆಳೆಸಿದ್ದೇ ವಿನಃ ವೈವಿಧ್ಯತೆಗೆ ಯಾವುದೇ ಪ್ರಕೃತಿದತ್ತ ಕಾರಣ ಇಲ್ಲ .

ಈ ಮಾಹಿತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ನಾಡಿನಲ್ಲಿ ತಯಾರಾಗುವ ತ್ಯಾಜ್ಯಗಳಾವುವೆಂದು ಒಂದೊಂದಾಗಿ ಪರಿಶೀಲಿಸೋಣ

ಮಲ ಮೂತ್ರಾದಿ ದೇಹದ ತ್ಯಾಜ್ಯಗಳು: ಮನುಷ್ಯರು ಹಾಗೂ ಪ್ರಾಣಿಗಳು ವಿಸರ್ಜಿಸಿದ ಮಲ, ಮೂತ್ರ , ವಾಂತಿ ಉಗುಳು ಕಫಃ ಇವೆಲ್ಲ ದೇಹದಿಂದ ಹೊರಬೀಳುವ ತ್ಯಾಜ್ಯಗಳು. ಈ ತ್ಯಾಜ್ಯಗಳಿಗೆ ದುರ್ವಾಸನೆ ಇದೆ. ಈ ತ್ಯಾಜ್ಯಗಳಲ್ಲಿ ಸಾಂಕ್ರಾಮಿಕ ರೋಗತರುವ ಸೂಕ್ಷ್ಮಜೀವಿಗಳು ಹಾಗೂ ಜಂತುಗಳಿರುತ್ತವೆ. ಈ ತ್ಯಾಜ್ಯಗಳು ಕುಡಿಯುವ ನೀರಿನ ಮೂಲವನ್ನು ಸೇರಿಕೊಂಡಾಗ ಅದರಲ್ಲಿರುವ ಜಂತುಗಳು ಹಾಗೂ ಸೂಕ್ಷಜೀವಿಗಳು ಈ ನೀರನ್ನು ಕುಡಿದ ಹೊಸ ಜೀವಿಯ ದೇಹವನ್ನು ಸೇರಿ ಬೆಳೆಯುವುದು ಅವುಗಳ ಜೀವನ ಶೈಲಿಯಾಗಿದೆ. ಈ ತ್ಯಾಜ್ಯವನ್ನು ಮುಕುರಿಕೊಳ್ಳುವ ನೊಣಗಳು ಇದೇ ಸೂಕ್ಷ್ಮಜೀವಿಗಳನ್ನು ನಾವು ತಿನ್ನುವ ಆಹಾರಕ್ಕೂ ವರ್ಗಾಯಿಸುತ್ತವೆ. ಈ ತ್ಯಾಜ್ಯಗಳ ವಿಶೇಷತೆಯೆಂದರೆ ಈ ತ್ಯಾಜ್ಯಗಳನ್ನೂ ಅಹಾರವಾಗಿ ತಿನ್ನುವ ಜೀವಿಗಳು ಪ್ರಕೃತಿಯಲ್ಲಿವೆ. ಹಾಗಾಗಿ ಸ್ವಲ್ಪ ದಿನಗಳಲ್ಲೆ ಈ ತ್ಯಾಜ್ಯ ಮಣ್ಣಿನಲ್ಲಿ ಸೇರಿಕೊಳ್ಳುತ್ತದೆ.

ಸತ್ತ ದೇಹ: ಸತ್ತ ಪ್ರಾಣಿಯ ದೇಹ ಇನ್ನೊಂದು ಮುಖ್ಯ ತ್ಯಾಜ್ಯ. ಪ್ರಾಣಿ ಸತ್ತ ಸ್ವಲ್ಪ ಹೊತ್ತಿನಲ್ಲೇ ಕೊಳೆಯಲಾರಂಭಿಸಿ ದುರ್ನಾತ ಬೀರುತ್ತದೆ. ಸತ್ತ ಪ್ರಾಣಿಯ ದೇಹದಲ್ಲೂ ಸೂಕ್ಷ್ಮಜೀವಿಗಳು ಬೆಳೆಯುತ್ತವೆ. ಈ ಸತ್ತ ದೇಹವನ್ನು ತೊಯ್ಯಿಸಿದ ಮಳೆಯ ನೀರಿನೊಂದಿಗೆ ಸೂಕ್ಷ್ಮಜೀವಿಗಳೂ ಕುಡಿಯುವ ನೀರಿನ ಮೂಲವನ್ನು ಸೇರಿಕೊಳ್ಳಬಹುದು. ಸತ್ತ ದೇಹದ ಮೇಲೆ ಮುತ್ತಿಕೊಳ್ಳುವ ನೊಣಗಳೂ ರೋಗಾಣುಗಳ ವಾಹಕಗಳು. ಸತ್ತ ದೇಹದ ಸುತ್ತಮುತ್ತಲಿನ ದುರ್ನಾತಯುಕ್ತ ಗಾಳಿಯಲ್ಲಿಯೂ ರೋಗಾಣುಗಳಿರುತ್ತವೆ. ಆದರೂ ಸ್ವಲ್ಪ ದಿನದಲ್ಲಿ ಸತ್ತ ದೇಹವೂ ಕೊಳೆತು ಮಣ್ಣಾಗಿ ಬಿಡುತ್ತದೆ

ಆಹಾರ ಪದಾರ್ಥ: ತಿಂದುಳಿದ ಹಾಗೂ ಚೆಲ್ಲಿದ ಅನ್ನ, ತರಕಾರಿ, ಹಣ್ಣು, ಮಾಂಸ ಹೀಗೆ ಅಳಿದುಳಿದ ಆಹಾರ ಪದಾರ್ಥಗಳೂ ಇನ್ನೊಂದು ಮುಖ್ಯ ತ್ಯಾಜ್ಯ. ಮನೆಯಿಂದ, ಹೋಟೆಲುಗಳಿಂದ, ಸಮಾರಂಭಗಳಿಂದ ಅಳಿದುಳಿದ ಈ ತ್ಯಾಜ್ಯಗಳದ್ದೂ ಮೇಲಿನದ್ದೇ ಸಮಸ್ಯೆ. ಪ್ರಾಣಿಪಕ್ಷಿಗಳು, ಇರುವೆ ಕೀಟಗಳು ಈ ತ್ಯಾಜ್ಯವನ್ನು ತಿನ್ನುತ್ತಾವೆನ್ನುವುದು ಹಾಗೂ ಕೊಳೆತು ಗೊಬ್ಬರವಾಗುತ್ತದೆನ್ನುವುದೊಂದು ಸಮಾಧಾನ ತರುವ ವಿಷಯವಾಗಿದೆ

ಕೊಳೆತ ನೀರು: ಆಹಾರ ಪದಾರ್ಥ (ತರಕಾರಿ ಹಾಗೂ ಮಾಂಸ), ಪಾತ್ರೆ ಪಗಡಿ, ವಾಹನ ಇತ್ಯಾದಿ ತೊಳೆದ ನೀರು, ಸ್ನಾನದ ನೀರು, ಉಗುಳಿದ ನೀರು, ಕಕ್ಕಸಿನ ನೀರು ಕಾರ್ಖಾನೆಯಿಂದ ಹೊರ ಬಂದ ನೀರುಗಳು ಇನ್ನೊಂದು ಮುಖ್ಯ ತ್ಯಾಜ್ಯ. ಈ ನೀರು ಎಂದೂ ಕುಡಿಯುವ ನೀರಿಗೆ ಸೇರಿಕೊಳ್ಳಬಾರದು ಯಾಕೆಂದರೆ ಈ ನೀರಿನಲ್ಲಿ ನೂರಾರು ಬಗೆಯ ಸಾಂಕ್ರಾಮಿಕ ರೋಗಾಣುಗಳು ಮಾತ್ರವಲ್ಲ ಸಾಬೂನು, ಡಿಟರ್ಜೆಂಟ್ ಹಾಗೂ ಅನೇಕ ಅಪಾಯಕಾರೀ ರಾಸಾಯನಿಕ ಪದಾರ್ಥಗಳಿರುತ್ತವೆ. ಈ ನೀರನ್ನು ಗಿಡಗಳಿಗೆ ಉಣಿಸಲು ಬಳಸಬಹುದೇ ಎಂಬುದೂ ಈ ನೀರು ರಾಸಾಯನಿಕಗಳಿಂದ ಎಷ್ಟು ಮುಕ್ತವಾಗಿದೆ ಎನ್ನುವುದನ್ನು ಅವಲಂಬಿಸಿದೆ.

ಹೊಗೆ: ಅಡುಗೆ ಮನೆಯ ಹಾಗೂ ಬಚ್ಚಲು ಕೋಣೆಯ ಹೊಗೆ, ತೋಟದಲ್ಲಿ ಸುಟ್ಟ ಕಸದ ಹೊಗೆ, ಮೋಟಾರು ವಾಹನಗಳ ಹೊಗೆ, ಕಾರ್ಖಾನೆಗಳಿಂದ ಬಂದ ಹೊಗೆ, ಹೀಗೆ ವಿವಿಧ ಮೂಲಗಳಿಂದ ಬರುವ ಹೊಗೆಯು ನಮ್ಮ ಗಾಳಿಯನ್ನು ಮಲಿನಗೊಳಿಸುವ ತ್ಯಾಜ್ಯವಾಗಿದೆ. ವಾತಾವರಣ ಬಿಸಿಯಾಗುವುದು, ಗಾಳಿಯಲ್ಲಿ ಇಂಗಾಲದ ಅಂಶ ಹೆಚ್ಚಾಗುವುದು, ಗಂಧಕದಂತಹಾ ಅಪಾಯಕಾರೀ ರಾಸಾಯನಿಕಗಳು ಈ ಹೊಗೆಯಲ್ಲಿರುವುದು ಆರೋಗ್ಯಕ್ಕೆ ಅಪಾಯಕಾರಿಯಾದ ಅಂಶಗಳು. ಇಂಗಾಲದ ಆಕ್ಸೈಡನ್ನು ಸಸ್ಯಗಳು ಬಳಸಿ ಆಮ್ಲಜನಕವನ್ನು ತಯಾರಿಸುತ್ತವೆ. ಇದು ಬಿಟ್ಟರೆ ಗಾಳಿಯನ್ನು ಸ್ವಚ್ಚಗೊಳಿಸುವ ಯಾವುದೇ ವಿಧಾನ ನಮ್ಮಲ್ಲಿಲ್ಲ. ಈ ಹೊಗೆಯಿಂದಾಗಿ ಭೂಮಿಯನ್ನು ಆವರಿಸಿ ರಕ್ಷಿಸುತ್ತಿರುವ ಒಝೋನ್ ಪದರಕ್ಕೆ ಹಾನಿಯಾಗುತ್ತದೆ. ಇದರ ಪರಿಣಾಮವಾಗಿ ದೇಹಕ್ಕೆ ಹಾನಿಯುಂಟು ಮಾಡುವ ಅನೇಕ ತರಂಗಗಳಿಗೆ ಭೂಮಿಯ ವಾತಾವರಣವನ್ನು ಪ್ರವೇಶಿಸಲು ಸಾಧ್ಯವಾಗುತ್ತದೆ.

ಘನ ತ್ಯಾಜ್ಯಗಳು: ಲೋಹ (ಕಬ್ಬಿಣ, ತಾಮ್ರ, ಅಲೂಮಿನಿಯಂ, ಸೀಸ, ಪಾದರಸ)ದ ಹಾಗೂ ಗಾಜಿನ ಚೂರುಗಳು, ಪ್ಲಾಸಿಕ್, ಬಟ್ಟೆ, ಪೇಪರ್ ಇವಕ್ಕೆ ಘನ ತ್ಯಾಜ್ಯಗಳೆನ್ನುತ್ತಾರೆ. ನಾಗರಿಕ ಪ್ರಪಂಚದಲ್ಲಿ ಉಪಯೋಗಿಸಿದ ನಂತರ ಬಿಸಾಕಿದೆಲ್ಲವೂ ಈ ತ್ಯಾಜ್ಯಗಳ ಪಟ್ಟಿಗೆ ಸೇರುತ್ತದೆ. ಆಟಿಕೆಗಳು, ತೊಟ್ಟಿಗಳು, ಎಲೆಕ್ಟ್ರಾನಿಕ್ ಉಪಕರಣಗಳು, ನ್ಯೂಸಪೇಪರ್, ಕವರುಗಳು, ಕಾಗದ ಪತ್ರಗಳು, ಕಟ್ಟಡ ಸಾಮಗ್ರಿಗಳು ಒಂದೇ. ಎರಡೇ-ಈ ಪಟ್ಟಿಯಲ್ಲಿರುವುದು. ಈ ತ್ಯಾಜ್ಯಗಳು ತನ್ನಿಂತಾನೇ ಕೊಳೆತು ಹೋಗುವುದಿಲ್ಲ, ಮಣ್ಣಾಗುವುದಿಲ್ಲ, ಕಾಗೆ ಹದ್ದುಗಳು ತಿನ್ನುವುದಿಲ್ಲ, ಗೊಬ್ಬರವೂ ಅಲ್ಲ. ವರ್ಷಗಟ್ಟಲೆ ರೂಪಾಂತರವಾಗದೇ ಹಾಗೆಯೇ ಇರುವುದು ಇವುಗಳ ವೈಶಿಷ್ಟ್ಯ. ಹಾಗಾಗಿ ದಿನ ಕಳೆದಂತೆ ರಾಶಿ ಬೀಳುವ ಈ ಕಸದ ರಾಶಿಯನ್ನು ಗುಡಿಸಿದ ಮೇಲೆ ಆಚೆ ಕಂಪೌಂಡಿಗೆ ಎಸೆಯುವುದೇ ಇವತ್ತಿನ ತನಕ ಇದನ್ನು ವಿಲೇವಾರಿ ಮಾಡಲು ನಾವು ಕಂಡು ಕೊಂಡಿರುವ ಮಾರ್ಗ. ಈ ತ್ಯಾಜ್ಯಗಳಲ್ಲಿ ಕೆಲವೊಮ್ಮೆ ಅಪಾಯಕಾರೀ ರಾಸಾಯನಿಕಗಳಿರುತ್ತವೆ ( ಉದಾ ಬ್ಯಾಟರೀ ಸೆಲ್ಲುಗಳು) ನೆಲದಲ್ಲಿ ಹೂತರೆ ಈ ರಾಸಾಯನಿಕಗಳು ನಿಧಾನವಾಗಿ ಮಣ್ಣಿಗೆ ಸೇರಿಕೊಳ್ಳಬಹುದು. ಸುಟ್ಟರೆ ಈ ರಾಸಾಯನಿಕಗಳು ಗಾಳಿಯನ್ನು ಸೇರಿಕೊಳ್ಳುತ್ತವೆ. ವಿಶೇಷವೆಂದರೆ ಈ ತ್ಯಾಜ್ಯಗಳಿಂದ ಯಾವುದೇ ಸಾಂಕ್ರಾಮಿಕ ರೋಗ ಹರಡುವುದಿಲ್ಲ. ಎಲ್ಲಾ ಕಡೆ ಹರಡಿಕೊಂಡಿದ್ದು ಗಲೀಜು ಕಾಣುವುದೊಂದೇ ಈ ತ್ಯಾಜ್ಯಗಳಿಂದಾಗುವ ಮುಖ್ಯ ತಾಪತ್ರಯ. ನಾಗರಿಕ ಲೋಕದಲ್ಲಿ ಇಂತಹಾ ವಸ್ತುಗಳ ಬಳಕೆ ವಿಪರೀತವಾಗಿರುವುದರಿಂದ ಈ ತ್ಯಾಜ್ಯಗಳು ರಾಶಿ ಬೀಳುತ್ತಿವೆ.

ವೈದ್ಯಕೀಯ ತ್ಯಾಜ್ಯ: ಸಿರಿಂಜು, ಲೋಹದ ಉಪಕರಣಗಳು, ಹತ್ತಿ, ಬಟ್ಟೆ ಇತ್ಯಾದಿ ವೈದ್ಯ ಹಾಗೂ ರೋಗಿ ಬಳಸುವ ಪ್ರತಿಯೊಂದು ವಸ್ತುವೂ ಬಳಕ ತ್ಯಾಜ್ಯವಾಗುತ್ತದೆ. ಈ ತ್ಯಾಜ್ಯಗಳಲ್ಲಿ ಸಾಂಕ್ರಾಮಿಕ ರೋಗ ಹರಡುವ ರೋಗಾಣುಗಳಿರುವುದರಿಂದ ಈ ಘನ ತ್ಯಾಜ್ಯಕ್ಕೆ ವೈದ್ಯಕೀಯ ತ್ಯಾಜ್ಯವೆಂದು ಹೆಸರಿಸಿದ್ದಾರೆ.

ಶಬ್ದ : ಶಬ್ದಗಳ ಮೂಲವನ್ನು ಪಟ್ಟಿ ಮಾಡುವ ಅಗತ್ಯ ಇಲ್ಲ. ಆದರೂ ಶಬ್ದವನ್ನು ಕಸದ ಪಟ್ಟಿಗೆ ಸೇರಿಸಲು ಕೆಲವರ ಮನಸ್ಸು ಒಪ್ಪಲಿಕ್ಕಿಲ್ಲ. ಆದರೂ ಸುಂದರ ಪರಿಸರದಲ್ಲಿ ಕರ್ಕಶ ಶಬ್ದವು ಕಸವಲ್ಲದೇ ಮತ್ತೇನು?

ವಿಕಿರಣಗಳು; ನಮ್ಮ ಪರಿಸರದಲ್ಲಿರುವ ಹೆಚ್ಚಿನ ವಿಕಿರಣಗಳು ಸೂರ್ಯನ ಬೆಳಕಿನೊಂದಿಗೆ ಬಂದಿರುವಂತವುಗಳು. ಭೂಮಿಯ ಸುತ್ತಲಿರುವ ಒಜೋನ್ ಪದರವು ಈ ವಿಕಿರಣಗಳು ವಾತಾವರಣವನ್ನು ಪ್ರವೇಶಿಸದಂತೆ ತಡೆಯುತ್ತದೆ, ಇನ್ನು ಅನೇಕ ವಿಕಿರಣಗಳು ನಮ್ಮ ಭೂಮಿಯಲ್ಲೇ ಇರುವ ವಸ್ತುಗಳಿಂದ ಹೊರ ಸೂಸುವಂತಾದ್ದು. ಉದಾಹರಣೆಗೆ ರೋಡಿಯಮ್ ಎಂಬ ಮೂಲವಸ್ತು ಹೊರ ಸೂಸುವ ವಿಕಿರಣಗಳು. ಇನ್ನು ನಾವು ಉಪಯೋಗಿಸುವ ಯಂತ್ರಗಳು ಉಪಕರಣಗಳು ಹಾಗೂ ರಿಯಾಕ್ಟರ್‌ಗಳೂ ವಿಕಿರಣಗಳನ್ನು ಹೊರ ಸೂಸುತ್ತವೆ. ನಮ್ಮ ಸುತ್ತಲಿರುವ ಕಲ್ಲು, ಶಿಲೆ, ಕಾಂಕ್ರೀಟುಗಳೂ ಸ್ವಲ್ಪ ಪ್ರಮಾಣದ ವಿಕಿರಣವನ್ನು ಹೊರ ಸೂಸುತ್ತವೆ. ನಮ್ಮ ದೇಹ ವಿಕಿರಣಗಳಿಗೆ ಒಡ್ಡಿ ಕೊಂಡರೆ ಕ್ಯಾನ್ಸರ್‌ನಂತಹಾ ಕಾಯಿಲೆಗಳು ಬರುತ್ತವೆ ಹಾಗೂ ಕೆಲವು ವಿಚಿತ್ರ ಅನುವಂಶಿಕ ಖಾಯಿಲೆಗಳನ್ನೂ ತರಬಹುದು.

ಆರೋಗ್ಯ ಮಾಹಿತಿಯ ಬಗ್ಗೆ ಪ್ರಶ್ನೆಗಳನ್ನು ಎಸ್.ಎಮ್.ಎಸ್.ಮೂಲಕವೂ ತಿಳಿಸಬಹುದು. ಸಂಚಾರಿ ದೂರವಾಣಿ ನಂ. : 9845136322

## ಆರ್ಷ ಪರಂಪರೆಯ ಪರಮೋಚ್ಚ ಪ್ರತಿನಿಧಿ ಯೋಗಿವರೇಣ್ಯ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು

...2ನೇ ಪುಟದಿಂದ

ಶೃಂಗೇರಿ ಜಗದ್ಗುರುಮಹಾಸಂಸ್ಥಾನದ ವ್ಯಾಖ್ಯಾನ ಸಿಂಹಾಸನದಲ್ಲಿ ಪಟ್ಟಾಭಿಷಿಕ್ತರಾದ ಅವರು ಆರಂಭದ ಹತ್ತು ವರ್ಷಗಳ ಕಾಲ ಅಧ್ಯಯನ ಅಧ್ಯಾಪನ-ತಪಶ್ಚರ್ಯೆಯಲ್ಲಿ ನಿರತರಾಗಿದ್ದರು. ನಂತರ ಮೈಸೂರು ಮಹಾರಾಜರು ಮತ್ತು ದಕ್ಷಿಣ ಭಾರತದ ಶಿಷ್ಯ ಜನರ ಪ್ರಾರ್ಥನೆಯಂತೆ ಮೂರು ವರ್ಷಗಳ ವಿಜಯ ಯಾತ್ರೆ ಮುಗಿಸಿ, ಶೃಂಗೇರಿಗೆ ಮರಳಿದ ಶ್ರೀಗಳವರು ಬಾಹ್ಯ ಪ್ರಪಂಚದಿಂದ ವಿಮುಖರಾಗಿ ಏಕಾಂತವಾಸದಲ್ಲಿ ನಿರತರಾದರು. ದಿನದ ಬಹಳಷ್ಟು ಸಮಯ ಅಂತರ್ಮುಖಿಗಳಾಗಿಯೇ ಇರುತ್ತಿದ್ದರು. ಬಹಿರ್ಮುಖರಾದಾಗ ಮನಸ್ಸಾದರೆ ಮಾತ್ರ ಆಹಾರ ಸ್ವೀಕರಿಸುತ್ತಿದ್ದರು. ಹಸಿವು ಬಾಯಾರಿಕೆಗಳನ್ನು ಗೆದ್ದು, ಕೆಲಮೊಮ್ಮೆ ಅನೇಕ ದಿನಗಳವರೆಗೆ ಆಹಾರವನ್ನೇ ಸ್ವೀಕರಿಸುತ್ತಿರಲಿಲ್ಲ. ಕ್ರಮೇಣ ದೇಹವು ಕೃಶವಾಗತೊಡಗಿತು; ಮುಖದಲ್ಲಿ ಅಪೂರ್ವವಾದ ತೇಜಸ್ಸು ಕಂಗೊಳಿಸುತ್ತಿತ್ತು.

ಹಂತ ಹಂತದಲ್ಲಿ ಬಾಹ್ಯಪ್ರಪಂಚದಿಂದ ಸಂಪೂರ್ಣವಾಗಿ ವಿಮುಖರಾದ ಶ್ರೀಶ್ರೀಗಳವರು ದೇಹಾಭಿಮಾನ, ಅಹಂಕಾರ, ಸುಖ-ದುಃಖ ಇತ್ಯಾದಿಗಳನ್ನು ಗೆದ್ದು, ಕೆಲಮೊಮ್ಮೆ ಬುದ್ಧಿ ಭ್ರಮಣೆಯಾದವರಂತೆ ವರ್ತಿಸುತ್ತಿದ್ದರು. 'ನಿರ್ಮಮಃ ನಿರಹಂಕಾರಃ ಸಮಲೋಷ್ಟಾಶ್ಮಕಾಂಚನಃ ಸಮದುಃಖಸುಖಃಧೀರ: ಅವಧೂತಃ' - ಎಂಬ ಪರಿಭಾಷೆಯಂತೆ ಅವರು ಅವಧೂತ ವರಿಷ್ಠರೇ ಆಗಿದ್ದರು.

ಅವಧೂತ ಚರ್ಯೆ ಮತ್ತು ಲೋಕ ವಿರಕ್ತಿಯನ್ನು ಗಮನಿಸಿದ ಶಿಷ್ಯ ಜನರ ಪ್ರಾರ್ಥನೆಯಂತೆ ತಾವು ಮಠದ ಆಡಳಿತ ನಿರ್ವಹಣೆ, ಶಿಷ್ಯಸ್ತೋಮದ ಯೋಗ-ಕ್ಷೇಮ ವಿಚಾರಣೆ ಇತ್ಯಾದಿಗಳಿಗೆ ಶಿಷ್ಯ ಸ್ವೀಕಾರ ಮಾಡುವುದಾಗಿ ತಿಳಿಸಿದರು. ಅದರಂತೆ 1931ರ ಮೇ 22ರಂದು ಜಗದ್ಗುರು ಚಂದ್ರಶೇಖರ ಭಾರತೀಸ್ವಾಮಿಗಳವರು ಬೆಂಗಳೂರಿನ ಶ್ರೀನಿವಾಸ ಎಂಬ ವಟುವಿಗೆ ಸಂನ್ಯಾಸದೀಕ್ಷೆ ನೀಡಿ, 'ಶ್ರೀ ಅಭಿನವ ವಿದ್ಯಾತೀರ್ಥ' ಎಂಬ ಯೋಗಕಲ್ಪವನ್ನು ಅನುಗ್ರಹಿಸಿದರು. ಅವರ ಅಪ್ಪಣೆಯಂತೆ ಮಠದ ಎಲ್ಲಾ ಧಾರ್ಮಿಕ, ಲೌಕಿಕ ಮೊದಲಾದ ಕಾರ್ಯಭಾರವನ್ನು ಕಿರಿಯ ಗುರುಗಳಿಗೆ ವಹಿಸಲಾಯಿತು. ಇದಾದ ನಂತರ ಹಿರಿಯ ಶ್ರೀಗಳು ಅಂತರ್ಮುಖರಾಗಿ ಆತ್ಮಾರಾಮರಾಗಿ ವರಿಷ್ಠವಾದ ಅವಧೂತ ಸ್ಥಿತಿಯಲ್ಲೇ ಇರುತ್ತಿದ್ದರು.

**ತ್ರಿಕಾಲ ಜ್ಞಾನಿಗಳು**

ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಭೂತ-ಭವಿಷ್ಯದ ವರ್ತಮಾನಗಳನ್ನು ಬಲ್ಲಂತಹ ಮಹಾಜ್ಞಾನಿಗಳು; ಶಿಷ್ಯಾನುಗ್ರಹ ಬದ್ಧದೀಕ್ಷಿತರು. ಅವರ ಮುಂದೆ ಯಾರು ಬಂದುನಿಂತರೂ, ಅವರ ಪೂರ್ವೋತ್ತರಗಳು ಅವರಿಗೆ ಕೂಡಲೇ ತಿಳಿಯುತ್ತಿತ್ತು. 1951ರಲ್ಲಿ ನೇಪಾಳದ ದೊರೆ ತ್ರಿಭುವನ ಮಹಾರಾಜರು ರಾಜ್ಯ ಕಳೆದುಕೊಂಡು ದೊಡ್ಡ ವಿಪತ್ತಿಗೆ ಒಳಗಾಗಿದ್ದರು. ಮೂರು ವರ್ಷಗಳ ಕಾಲ ತಲೆಮರೆಸಿಕೊಂಡು ಅವರು ಭಾರತದಲ್ಲೇ ಇರಬೇಕಾಯಿತು.

(ಮುಂದುವರಿಯುವುದು...)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು ''ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ''ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2015-2016ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಅರ್ಜಿ ಫಾರಂನ್ನು ಶಾರದಾ ಮಂಟಪ ಅಥವಾ ಶ್ರೀಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ಪಡೆದು ಫಾರಂ ಭರ್ತಿ ಮಾಡಿ, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2015ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು, ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),**
**ಶ್ರೀ ಶಾರದಾ ಮಂಟಪ ಕುಂಜಿಬೆಟ್ಟು ಉಡುಪಿ - 576 102. ಫೋನ್ : 0820-2520754**



### ಕುಮಾರಿ ಅಕ್ಷತಾ ರಾವ್

ಮಂಗಳೂರಿನ ಅಲಸೂರು ವಾಸಿಗಳಾದ ಶ್ರೀಮತಿ ಹರಿಣಿ ಹಾಗೂ ಕುಂಜಾರು ಲಕ್ಷ್ಮೀನಾರಾಯಣರಾಯರ ಪುತ್ರಿ ಕುಮಾರಿ ಅಕ್ಷತಾ ರಾವ್ ಇತ್ತೀಚಿಗೆ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವ ವಿದ್ಯಾಲಯದ (ವಿ.ಟಿ.ಯು) ಬಿ.ಇ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ಅಂತಿಮ ವರ್ಷದ ಪರೀಕ್ಷೆಯಲ್ಲಿ ನಾಲ್ಕನೇ ರ್‍ಯಾಂಕ್ ಪಡೆದು ಉತ್ತೀರ್ಣಳಾಗಿದ್ದಾಳೆ. ಸದ್ಯ ಎಮ್.ಟೆಕ್. ಸ್ನಾತಕೋತ್ತರ ಪದವಿಯನ್ನು ಬೆಂಗಳೂರಿನ ಅಂಬೇಡ್ಕರ್ ಕಾಲೇಜಿನಲ್ಲಿ ಮುಂದುವರಿಸುತ್ತಿರುವ ಕುಮಾರಿ ಅಕ್ಷತಾಳು ತನ್ನ ಬಿ.ಇ. ವ್ಯಾಸಂಗವನ್ನು ಪ್ರತೀವರ್ಷವೂ ರ್‍ಯಾಂಕ್ ವಿಜೇತೆಯಾಗಿ ಪೂರ್ಣಗೊಳಿಸಿದ್ದಾಳೆ. ಕಿರಿಯ ವಯಸ್ಸಿನಿಂದಲೂ ಅಪಾರ ಪ್ರತಿಭಾವಂತೆಯಾದ ಅಕ್ಷತಾಳು ಮಾತಾಪಿತೃಗಳ ಏಕೈಕ ಪುತ್ರಿ. ನಮ್ಮ ಸಮಾಜದ ಮಿಂಚಿದ ಪ್ರತಿಭೆಯನ್ನು 'ಶಾರದಾ' ಹೃತ್ಪೂರ್ವಕವಾಗಿ ಅಭಿನಂದಿಸುತಾ. ಬಾಲಕಿಯ ಭವ್ಯ ಭವಿಷ್ಯತ್ತಿಗೆ ಶ್ರೀ ಶಾರದಾ ದೇವಿಯ ಸಂಪೂರ್ಣ ಕೃಪಾಕಟಾಕ್ಷವಿರಲೆಂದು ಹಾರೈಸುತ್ತೇವೆ.

### ಶ್ರೀ ರಾಮ್.ಎನ್.ರಾವ್ — ಶ್ರೀ ಲಕ್ಷ್ಮೀ ಎನ್ ರಾವ್





ಬೆಂಗಳೂರಿನ ನಾಗರಾಜ ರಾವ್ ಹಾಗೂ ಪೂರ್ಣಿಮಾ ನಾಗರಾಜ ದಂಪತಿಗಳ ಪುತ್ರ ಶ್ರೀ ರಾಮ ಎನ್.ರಾವ್ ಪಿಯುಸಿಯಲ್ಲಿ 95.66% ಅಂಕ ಗಳಿಸಿ ಸಿಇಟಿ ಮೆಡಿಕಲ್‌ನಲ್ಲಿ 141ನೇ ರ್‍ಯಾಂಕ್ ಹಾಗೂ ಇಂಜಿನಿಯರಿಂಗ್‌ನಲ್ಲಿ 60ನೇ ರ್‍ಯಾಂಕ್ ಪಡೆದಿದ್ದಾನೆ ಹಾಗೂ ಅವರ ಪುತ್ರಿ ಶ್ರೀ ಲಕ್ಷ್ಮೀ ಎನ್ ರಾವ್ ಪಿಯುಸಿಯಲ್ಲಿ 94% ಸಿಇಟಿ ಮೆಡಿಕಲ್‌ನಲ್ಲಿ 953ನೇ ರ್‍ಯಾಂಕ್ ಹಾಗೂ ಇಂಜಿನಿಯರ್‌ನಲ್ಲಿ 3,892 ಗಳಿಸಿದ್ದಾಳೆ. ಇವರಿಗೆ ಶ್ರೀ ಶಾರದಾ ಪತ್ರಿಕೆಯ ಅಭಿನಂದನೆಗಳು.



### ಕು| ಶುಭ ಎ.ಎಸ್.

ಕಾಸರಗೋಡು ತಾಲೂಕು ಅಡೂರು ಶಿವಬ್ರಾಹ್ಮಣ ಸಂಘದ ಮಾಜಿ ಕಾರ್ಯದರ್ಶಿ ಅಡೂರು ಶ್ರೀಧರರಾಯರ ಪುತ್ರ ಡಾ|| ಸಂತೋಷ್ ಮತ್ತು ಗೀತಾ ದಂಪತಿಗಳ ಸುಪುತ್ರಿ ಕು| ಶುಭ ಎ.ಎಸ್. Horticulture Bsc 2nd Year ನಲ್ಲಿ Shimoga University ಗೆ ಪ್ರಥಮ ಸ್ಥಾನ ಪಡೆದಿದ್ದು ವಾರ್ಷಿಕ ಪ್ರತಿಭಾವಂತ ವಿದ್ಯಾರ್ಥಿಗಳ ವಿದ್ಯಾರ್ಥಿ ಸಹಾಯಧನದ Scholarship ಪಡೆದಿರುತ್ತಾಳೆ. ಪ್ರಥಮ ವರ್ಷದಲ್ಲೂ ಈಕೆ ಇದೇ ಸಾಧನೆ ಮಾಡಿದ್ದಾಳೆ. ದ್ವಿತೀಯ ವರ್ಷದಲ್ಲೂ ಇದೇ ಸಾಧನೆ ಮುಂದುವರಿಸಿದ್ದಾಳೆ. ಇವರಿಗೆ ಶ್ರೀ ಶಾರದಾ ಪತ್ರಿಕೆಯ ಅಭಿನಂದನೆಗಳು.



### ನಿಧಿ ಎಲ್.ರಾವ್

ಹೊಸೂರಿನ ಶ್ರೀ ಲಕ್ಷ್ಮೀನಾರಾಯಣ ಎಸ್.ರಾವ್, ಗ್ಯಾಬ್ರಿಯಲ್ ಇಂಡಿಯಾ ಲಿಮಿಟೆಡ್ ಇದರ ಡಿಜಿಎಮ್‌ರವರ ಮಗಳಾದ ನಿಧಿ ಎಲ್.ರಾವ್ ಇವರು ಸಿ.ಬಿ.ಎಸ್.ಸಿಯ ಹತ್ತನೇ ತರಗತಿಯಲ್ಲಿ 10/10 ಅಂಕಗಳಿಸಿ ಉತ್ತೀರ್ಣಳಾಗಿದ್ದಾಳೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.



### ಸುಮಾಶ್ರೀ

ಮಂಗಳೂರಿನ ಕು| ಸುಮಾಶ್ರೀ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.98 ಅಂಕ ಗಳಿಸಿ ತೇರ್ಗಡೆ ಹೊಂದಿದ್ದಾಳೆ. ಇವಳು ಶ್ರೀ ಕೆ. ಸುರೇಶ್ ಕಡಬ ಹಾಗೂ ಶ್ರೀಮತಿ ಮಮತ ಎಸ್.ರಾವ್‌ರವರ ಪುತ್ರಿ. ಹಾಗೂ ಮಂಗಳೂರಿನ ವಿಕ್ಟೋರಿಯಲ್ ಹೆಣ್ಮಕ್ಕಳ ಪ್ರೌಢಶಾಲೆಯ ವಿದ್ಯಾರ್ಥಿನಿ. ಇವಳು ನಮ್ಮ ಸಂಘದಲ್ಲಿ ಜರಗಿದ ತರಬೇತಿ ಶಿಬಿರದಲ್ಲಿ ಭಾಗವಹಿಸಿರುತ್ತಾಳೆ. ಇವರಿಗೆ ಶ್ರೀಶಾರದಾ ಬಳಗದ ಅಭಿನಂದನೆಗಳು.

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

## ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.3,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2015ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ,**
**ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 102.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಉದಯಚಂದ್ರ ಪ್ರತಿಭಾ ಪುರಸ್ಕಾರ 2015-16

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2014-15ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2015ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿ ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು ''ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102'' ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಅಂಬಲ್ಪಾಡಿ ಕೃಷ್ಣ ರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್‌ಗಳಿಸಿದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2015ರ ಒಳಗೆ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ : | **''ಸತ್ಸಂಗದವರಿಂದ ಭಜನೆ''** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ : | **''ಸೌಂದರ್ಯಲಹರಿ ಪಾರಾಯಣ''** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **''ಪಾರಾಯಣ''** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.03-08-2015) ''ಸಾಮೂಹಿಕ ಗಣಹೋಮ'' ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.21-07-2015 ಹಾಗೂ 04-08-2015 ಪಂಚಮಿಯಂದು ''ನಾಗದೇವರಿಗೆ ತನುಸೇವೆ'' ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.19-08-2015ಕ್ಕೆ ನಾಗರಪಂಚಮಿ ಆಚರಣೆ ಬೆಳಿಗ್ಗೆ 10-00ರಿಂದ ಮಧ್ಯಾಹ್ನ 12-00ರ ತನಕ**

**ತಾ.29-07-2015 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

**ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ**

# ಶುಭ ಪ್ರಯಾಣ




ಶ್ರೀಮತಿ ವೀಣಾ ಜೆ.ರಾವ್ ಹಾಗೂ ಶ್ರೀ ಬಿ. ಜಯರಾಮ ರಾವ್‌ರವರ ಪುತ್ರ


**ಶ್ರೀ ಸೌರಭ್ ಜೆ.ರಾವ್ ಹಾಗೂ ಶ್ರೀಮತಿ ಅಪೂರ್ವ**


ಇವರು ಆಯರ್ಲಂಡ್ ದೇಶಕ್ಕೆ ಉದ್ಯೋಗ ನಿಮಿತ್ತ ತೆರಳಿರುತ್ತಾರೆ.
ಇವರಿಗೆ ಶುಭ ಹಾರೈಸುವ

**ಶ್ರೀಮತಿ ವೀಣಾ ಜೆ. ರಾವ್ ಹಾಗೂ ಶ್ರೀ ಜಯರಾಮ ರಾವ್ ದಂಪತಿಗಳು ಹಾಗೂ ಶ್ರೀ ಮೋಹನ್‌ರಾವ್ ಶಿರೋಳ್ಕರ್ ಮತ್ತು ಶ್ರೀಮತಿ ಮಾಧವಿ ಎಮ್. ಶಿರೋಳ್ಕರ್**



# ಚಿಣ್ಣರ ಅಂಗಳ





ಮಾ। ಅಕ್ಷಯ್
**6ನೇ ತರಗತಿ, ಅನಂತೇಶ್ವರ ಪ್ರಾಥಮಿಕ ಶಾಲೆ, ಉಡುಪಿ.**



ವೈ. ಮಯೂರ ರಾವ್
**3ನೇ ತರಗತಿ, ವಿದ್ಯೋದಯ ಪಬ್ಲಿಕ್ ಸ್ಕೂಲ್, ಉಡುಪಿ.**

# ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಪಡುಬಿದ್ರಿ
## ಮಹಾಸಭೆ ಹಾಗೂ ವಾರ್ಷಿಕೋತ್ಸವ



ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ñ ಮಹಾಸಭೆ ಹಾಗೂ ವಾರ್ಷಿಕೋತ್ಸವವು ದಿ. 17-06-2015ರ ರವಿವಾರ ಪಡುಬಿದ್ರಿಯ ಶ್ರೀ ಬಾಲಗಣಪತಿ - ಪ್ರಸನ್ನ ಪಾರ್ವತಿ ದೇವಸ್ಥಾನದ ಪ್ರಾಂಗಣದಲ್ಲಿ ನಡೆಯಿತು. ಪೂರ್ವಾಹ್ನದ ಉಪಾಹಾರದ ಬಳಿಕ ಘಂಟೆ 9 ರಿಂದ 10ರ ವರೆಗೆ ಸಂಘದ ವಾರ್ಷಿಕ ಮಹಾಸಭೆಯು ಸಂಘದ ಗೌರವಾಧ್ಯಕ್ಷರಾದ ಶ್ರೀಯುತ ಪಿ.ಬಿ ವಾಸುದೇವ ರಾವ್ ಹಾಗೂ ಅಧ್ಯಕ್ಷರಾದ ಶ್ರೀಯುತ ಎಂ.ಕೆ ಮೋಹನ್‌ರಾವ್‌ರವರ ನಿರ್ದೇಶನದಲ್ಲಿ ನಡೆಯಿತು. ಪ್ರಾರ್ಥನೆಯ ಬಳಿಕ ಕಾರ್ಯದರ್ಶಿಯವರಾದ ಸುಧಾಕರ ಬೆಳ್ಳೆ ಇವರು ಗತವರ್ಷದ ವರದಿಯನ್ನು ಸಭೆಯ ಮುಂದಿಟ್ಟು ಮಂಜೂರಾತಿ ಪಡೆದರು. ಬಳಿಕ ಸಂಘದ ಕೋಶಾಧಿಕಾರಿಯವರಾದ ಅರವಿಂದ್ ರಾವ್ ಇವರು 2014-15 ನೇ ಸಾಲಿನ ಲೆಕ್ಕಪತ್ರವನ್ನು ಹಾಗೂ 2015-16ನೇ ಸಾಲಿನ ಮುಂಗಡ ಪತ್ರವನ್ನು ಸಭೆಯಲ್ಲಿ ಮಂಡಿಸಿದರು. ಇದನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಬಳಿಕ ಅಪರಾಹ್ನ ಘಂಟೆ 12ರವರೆಗೆ ಮಹಿಳಾ ವೇದಿಕೆಯ ವತಿಯಿಂದ ಸಂಘದ ಸದಸ್ಯ-ಸದಸ್ಯೆಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ವೈವಿಧ್ಯಮಯ ನೃತ್ಯ ರೂಪಕಗಳು ನೆರೆದಿದ್ದ ಸಮಾಜ ಬಾಂಧವರ ಮನ ಸೆಳೆದವು. ನಂತರ ನಡೆದ ಸಭಾಕಾರ್ಯಕ್ರಮದ ಅಧ್ಯಕ್ಷತೆಯನ್ನು ಇನ್ನ ಎ.ಬಿ.ಸಿ.ಡಿ. ಮತ್ತು ಇ ಟ್ರಸ್ಟ್‌ನ ಅಧ್ಯಕ್ಷರಾದ ಶ್ರಿಯುತ ಐ.ಚಂದ್ರಕಾಂತ ರಾವ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಮ್ಮ ಸಮಾಜ ಬಾಂಧವರಾದ ಉಡುಪಿಯಲ್ಲಿನ ಪ್ರಸಿದ್ಧ ಚರ್ಮ ಹಾಗೂ ಸೌಂದರ್ಯವರ್ಧಕ ತಜ್ಞರಾದ ಶ್ರೀಯುತ ಡಾ।ಬಿ.ಕೆ. ಲೋಕೇಶ್ ರಾವ್ ಭಾಗವಹಿಸಿದ್ದರು. ಅಲ್ಲದೆ ನಮ್ಮ ಸಂಘದ ಅಧ್ಯಕ್ಷರಾದ ಎಂ.ಕೆ ಮೋಹನ್‌ರಾವ್, ಗೌರವಾಧ್ಯಕ್ಷರಾದ ಪಿ.ಬಿ ವಾಸುದೇವರಾವ್, ಮಹಿಳಾ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವಿಜಯ ದೇವರಾಯ ಶರ್ಮ, ಯುವ ವೇದಿಕೆಯ ಅಧ್ಯಕ್ಷರಾದ ಜನಾರ್ಧನ ರಾವ್, ಸುರತ್ಕಲ್ ಸಂಘದ ಅಧ್ಯಕ್ಷರಾದ ಶ್ರೀಯುತ ಮಾಧವ ರಾವ್, ಕಾರ್ಕಳ ಸಂಘದ ಅಧ್ಯಕ್ಷರಾದ ಶ್ರೀ ಮುರಳೀಧರ ಶರ್ಮ, ಉಡುಪಿಯ ಅಧ್ಯಕ್ಷರಾದ ಶ್ರೀ ಪ್ರಫುಲ್ಲಚಂದ್ರ ರಾವ್, ಮೂಡುಬಿದ್ರಿಯ ಅಧ್ಯಕ್ಷರಾದ, ಶ್ರೀ ಬಿ.ಚಂದ್ರಶೇಖರ ರಾವ್, ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಾರ್ಥನೆಯ ಬಳಿಕ ದೀಪ ಬೆಳಗುವುದರೊಂದಿಗೆ ಸಭಾ ಕಾರ್ಯಕ್ರಮ ಆರಂಭವಾಯಿತು.

ಮೊದಲಿಗೆ ಅರುಣ್ ಕುಮಾರ್ ಇವರು ಎಲ್ಲರನ್ನೂ ಸ್ವಾಗತಿಸಿದರು. ಬಳಿಕ ನಮ್ಮ ಸಂಘದ ವ್ಯಾಪ್ತಿಗೆ ಒಳಪಡುವ ಎರ್ಮಾಳಿನ ನಿವೃತ್ತ ಶಿಕ್ಷಕರು ಹಾಗೂ ಹಿರಿಯ ಯಕ್ಷಗಾನ ಕಲಾವಿದರಾದ ಶ್ರೀಯುತ ವೈ. ವಾಸುದೇವ ರಾವ್ ಇವರ ಸಾಧನೆಗಾಗಿ ಸನ್ಮಾನ ಪತ್ರವನ್ನು ನೀಡಿ ಗೌರವಿಸಲಾಯಿತು. ಹಾಗೆಯೇ ಈ ಬಾರಿ ಎಸ್.ಎಸ್.ಎಲ್.ಸಿ ಯಲ್ಲಿ 95% ಅಂಕ ಗಳಿಸಿದ ಮುದರಂಗಡಿಯ ಕುಮಾರಿ ಅಕ್ಷತಾಳನ್ನು ಸನ್ಮಾನಿಸಲಾಯಿತು. ಬಳಿಕ ಸಂಘದ ವ್ಯಾಪ್ತಿಗೆ ಒಳಪಟ್ಟ ಪಿಯುಸಿ, ಪದವಿ ಹಾಗೂ ವೃತ್ತಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ, ಸಹಾಯವನ್ನು ಅಪೇಕ್ಷಿಸುವ ಸುಮಾರು 13 ವಿದ್ಯಾರ್ಥಿಗಳಿಗೆ ರೂ. 85,000/- ಧನ ಸಹಾಯ ನೀಡಲಾಯಿತು.

ಐ.ಚಂದ್ರಕಾಂತರಾವ್‌ರವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಸಂಘದ ಕಾರ್ಯನಿರ್ವಹಣೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ, ಪ್ರತಿಯೊಬ್ಬ ಸಮಾಜ ಬಾಂಧವರು ತಮ್ಮ ದುಡಿಮೆಯಲ್ಲಿ ಕನಿಷ್ಟ 5%ವನ್ನಾದರೂ ಸಮಾಜಕ್ಕೆ ತೊಡಗಿಸಬೇಕೆಂದು ಹೇಳಿದರು. ಡಾ।ಬಿ.ಕೆ ಲೋಕೇಶ್ ರಾವ್‌ರವರು ತಮ್ಮ ವೃತ್ತಿಕ್ಷೇತ್ರದಲ್ಲಿ ಸಮಾಜ ಬಾಂಧವರ ಬಗ್ಗೆ ಉತ್ತಮ ರೀತಿಯಲ್ಲಿ ಸ್ಪಂದಿಸುವ ಭರವಸೆ ನೀಡಿ, ತಾವು ಸ್ಥಾನಿಕರೆಂಬ ನೆಲೆಯಲ್ಲಿ ಸಮಾಜದಲ್ಲಿ ಮುಂದೆ ಬರಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ಬ್ಯಾಂಕಿನ ಜನರಲ್ ಮೇನೇಜರ್ ಆಗಿ ಪದೋನ್ನತಿಗೊಂಡ ಮೂಡುಬಿದ್ರಿ ಸಂಘದ ಅಧ್ಯಕ್ಷರಾದ ಬಿ.ಚಂದ್ರಶೇಖರ್ ರಾವ್ ಇವರನ್ನು ಗೌರವಿಸಲಾಯಿತು. ಶ್ರೀಯುತರು ಸಮಾಜದ ಬಾಂಧವರು ಸದ್ರಿ ಬ್ಯಾಂಕಿನ ಲಿಖಿತ ಪರೀಕ್ಷೆಯಲ್ಲಿ ಉತ್ತೀರ್ಣರಾದಲ್ಲಿ ಮುಂದೆ ಉದ್ಯೋಗ ದೊರಕಿಸಿಕೊಡುವ ಭರವಸೆ ನೀಡಿದರು. ಕೊನೆಗೆ ಸಂಘದ ನಿರ್ದೇಶಕರಾದ ಎಲ್ಲೂರಿನ ಶ್ರೀ ಸುಬ್ಬರಾವ್ ಧನ್ಯವಾದ ಸಮರ್ಪಣೆ ನೀಡಿದರು.

**ವರದಿ : ಶ್ರೀಮತಿ ಸೀತಾದೇವಿ ಭಾಸ್ಕರ್ ರಾವ್ ನಿರ್ದೇಶಕರು.**

## ಪ್ರಕಟಣೆ

ಶ್ರೀ ಶಾರದಾ ಪತ್ರಿಕೆಗೆ ನಮ್ಮ ಸಮಾಜಬಾಂಧವರು ತಮ್ಮಲ್ಲಿ ಜರಗಿದ ಕಾರ್ಯಕ್ರಮಗಳ ವರದಿ, ಅನಿಸಿಕೆ, ಲೇಖನ,ಕವನ, ಸುಖ ಹಾಗೂ ದುಃಖದ ವರದಿಗಳನ್ನೆಲ್ಲಾ ಸಂಪಾದಕರು, ಶ್ರೀ ಶಾರದಾ ಪತ್ರಿಕೆ,ಶ್ರೀ ಶಾರದಾ ಮಂಟಪ, ಶಾರದಾ ನಗರ ,ಕುಂಜಿಬೆಟ್ಟು,ಉಡುಪಿ 576102 ಈ ವಿಳಾಸಕ್ಕೆ ಪತ್ರಮುಖೇನ ಕಳುಹಿಸಬಹುದು. ಇ-ಮೇಲ್ ಮುಖಾಂತರ ಕಳುಹಿಸುವವರು sudarshany@rediffmail.comಗೆ ಕಳುಹಿಸಬೇಕಾಗಿ ವಿನಂತಿ.ಉದಯೋನ್ಮುಖ ಬರಹಗಾರರಿಗೆ ಖಂಡಿತಾ ಪ್ರೋತ್ಸಾಹ ನೀಡುತ್ತೇವೆ. ಹಾಗೂ ಮಕ್ಕಳಿಗಾಗಿಯೇ ಒಂದು ಪುಟವನ್ನು ಮೀಸಲಾಗಿಡುತ್ತಿದ್ದೇವೆ. ಮಕ್ಕಳ ಬರಹ ,ಕವನ ಹಾಗೂ ಚಿತ್ರಗಳನ್ನು ಪ್ರಕಟಿಸುವ ಉದ್ದೇಶದೊಂದಿಗೆ ಪತ್ರಿಕೆಯ ಮೊದಲ ಮತ್ತು ಕೊನೆಯ ಪುಟಗಳನ್ನು ಕಲರ್ ಪೇಜ್ ಮಾಡುತ್ತಿದ್ದೇವೆ ಮಕ್ಕಳು ನಮ್ಮ ಸಮಾಜದ ಚಟುವಟಿಕೆಗಳಲ್ಲಿ ಭಾಗವಹಿಸುವಂತಾಗಬೇಕೆಂಬುದು ನಮ್ಮ ಉದ್ದೇಶ. ಪೋಷಕರು ತಮ್ಮ ಮಕ್ಕಳು ಬರೆದ ಚಿತ್ರ,ಕವನ ಹಾಗೂ ಲೇಖನಗಳನ್ನು ಮಗುವಿನ ಫೋಟೋ, ಹೆಸರು, ವಯಸ್ಸು, ಶಾಲೆಯ ಹೆಸರು, ತರಗತಿ ಹಾಗೂ ತಂದೆ ತಾಯಿಯ ಹೆಸರಿನೊಂದಿಗೆ ಮೇಲಿನ ವಿಳಾಸಕ್ಕೆ ಪ್ರತಿ ತಿಂಗಳ 25ನೇ ತಾರೀಕಿನ ಒಳಗೆ ಕಳುಹಿಸಬೇಕಾಗಿ ವಿನಂತಿ.

Owned & Published by : Sri Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Dr.Y. Sudharshan Rao Udupi, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org